# ನಾದ ನೂಪುರ ವಂಡಾರು

# Nadanoopura Vandaru




ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – www.nyt.1ngo.in


**ಕಾಳಿಂಗ ನಾವುಡ ಸಂಸ್ಮರಣೆ– ವಿಶೇಷ ಸಂಚಿಕೆ**

ಜನನ: 6–06–1958
ಅಸ್ತಂಗತ: 27–05–1990

## ಪರಿವಿಡಿ


ಬೋರ್ಡ್ ರೂಮ್
ಸಂಪಾದಕೀಯ
ಭಾಗವತಿಕೆ–ಕಾಳಿಂಗ ನಾವುಡ ಮಾರ್ಗ
ಕಲಾವಿದರಿಗೆ ತುರ್ತು ನಿಧಿ– ಒಂದು ಚಿಂತನೆ
ಯಕ್ಷಗಾನದೊಳಗೊಂದು ಡಿಜಿಟಲ್ ಕ್ರಾಂತಿ
ಡಿಜಿಟಲ್ ಮಾಧ್ಯಮ – ಅವಲೋಕನ
ಮೇಳ ಕಟ್ಟಿದ ಮಹಿಳೆ – ಅಕ್ಕಾಣಿಯಮ್ಮ
ಚಾರಿಟಿ ರೂಮ್
ಕಾಡುವ ಪಾತ್ರ –
1. ದಿನೇಶ್ ಅಮ್ಮಣ್ಣಾಯ
2. ಸೀತೂರು ಅನಂತ ಪದ್ಮನಾಭ
ನಮ್ಮ ಲೈಬ್ರರಿ – ಅಂಗದ ಸಂಧಾನ


## ಬೋರ್ಡ್ ರೂಮ್



ವಂಡಾರು ಗೋವಿಂದ

ಸ್ನೇಹಿತರೆ ನಮಸ್ಕಾರ,

ಕಳೆದ ವಾರವಷ್ಟೇ ನಾನು ಗೆಜ್ಜೆ ಸೇವೆ ಸಲ್ಲಿಸುತ್ತಿರುವ ಹೆಮ್ಮೆಯ ಸಾಲಿಗ್ರಾಮ ಮೇಳದ ತಿರುಗಾಟದ ಕೊನೆಯ ಸೇವೆಯಾಟ ನಡೆಯಿತು. ಕಳೆದೆರಡು ವರ್ಷಗಳಲ್ಲಿ ಹೆಚ್ಚು ಲಾಭದಾಯಕವಲ್ಲದ ಮೇಳದ ತಿರುಗಾಟವೂ ಕೊನೆಗೊಂಡು ಮಳೆಗಾಲದ ದಿನಗಳನ್ನು ಪ್ರದರ್ಶನವಿಲ್ಲದೆ ಕಳೆಯುವುದು ಹೇಗಪ್ಪಾ ಎಂಬ ಚಿಂತೆ ಕಲಾವಿದರೆಲ್ಲರಲ್ಲಿ ಮನೆ ಮಾಡಿತ್ತು. ಈ ವರ್ಷ ಹಾಗಲ್ಲ. ಮಳೆಗಾಲದ ಯಕ್ಷಗಾನದ ಚಟುವಟಿಕೆಗಳು ಮತ್ತೆ ಗರಿಗೆದರಿಕೊಂಡಿವೆ. ಕಾರ್ಯಕ್ರಮ ಸಂಘಟಕರಲ್ಲಿ ಮತ್ತೆ ಯಕ್ಷಗಾನವನ್ನು ಆಯೋಜಿಸುವ ಉತ್ಸಾಹ ಕಂಡು ಮತ್ತೆ ಮಳೆಗಾಲದ ಜೈತ್ರಯಾತ್ರೆಯ ವೈಭವ ಮರುಕಳಿಸಲಿ ಎಂದು ಕಲಾವಿದರಲ್ಲೊಬ್ಬನಾಗಿ ಆಶಿಸುವೆ. ಕಳೆದ ಸಾಲಿನಲ್ಲಿ ಜನ್ಮ ತಳೆದ ಕಲಾಸೇವೆಯ ಕನಸು ಹೊತ್ತ ನಮ್ಮ ಟ್ರಸ್ಟ್ ಕಲಾವಿದರಿಗೆ ಮಾನಸಿಕ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಒಂದೆರಡು ಪ್ರದರ್ಶನಗಳನ್ನು ಆಯೋಜಿಸಿತ್ತು. ಆದರೆ ಅದು ಕೇವಲ ಯೂಟ್ಯೂಬ್ ಪ್ರದರ್ಶನಕ್ಕಷ್ಟೇ ಸೀಮಿತವಾಯಿತು. ಆದರೆ ಈ ಬಾರಿ ಹಾಗಲ್ಲ. ಟ್ರಸ್ಟ್ ಮೂಲಕ ಒಂದಷ್ಟು ಕಲಾವಿದರಿಗೆ ಉದ್ಯೋಗ ಮತ್ತು ಪ್ರದರ್ಶನ ನೀಡಲು ಸಜ್ಜಾಗಿದ್ದೇವೆ. ಕೆಲವು ಉತ್ತಮ ಸತ್ವಪೂರ್ಣ ಪ್ರಸಂಗಗಳನ್ನು ವೇದಿಕೆಗೆ ತರೋ ಹುಮ್ಮಸ್ಸಿನಲ್ಲಿದ್ದೇವೆ. ಅಪರೂಪದ, ಪೌರಾಣಿಕ ಕಥಾಹಂದರಗಳು ನಮ್ಮ ಈ ಬಾರಿಯ ಆದ್ಯತೆಯಾಗಿದ್ದು ಬೇಡಿಕೆಯ ಮೇಲೆ ಕಲಾವಿದರನ್ನಾಯ್ದು ನಿಮ್ಮನ್ನು ರಂಜಿಸುವ ಭರವಸೆ ನೀಡಬಲ್ಲೆ. ನಮ್ಮ ಟ್ರಸ್ಟ್ ಮುಂದಿನ ದಿನಗಳಲ್ಲಿ ಬಲಯುತವಾಗಬೇಕೆಂದರೆ ಟ್ರಸ್ಟ್ ಮೂಲಕ ಕಾರ್ಯಕ್ರಮ ನಡೆಸಬೇಕಾದವರು ನೀವು. ಟ್ರಸ್ಟ್ ನ ಕಾರ್ಯಕ್ರಮಗಳು ನಮ್ಮೂರು, ಹೊರ ಜಿಲ್ಲೆ, ರಾಜ್ಯಗಳ ಮಟ್ಟದಲ್ಲಿ ಸಾಗಿ ಬೆಳೆಸುವಲ್ಲಿ ಕಾರ‍್ಯಕ್ರಮ ಆಯೋಜಕರಾದ, ಪ್ರೇಕ್ಷಕರಾದ, ಕಲಾಭಿಮಾನಿಗಳಾದ ನೀವು ಕೈಹಿಡಿದು ನಡೆಸಿದರೆ, ಟ್ರಸ್ಟ್‌ನ ಆಶಯವೂ ನೆರವೇರಿದ ಸಾರ್ಥಕತೆ. ಟ್ರಸ್ಟ್ ಮೂಲಕ ನೀಡಿದ ಪ್ರತಿಯೊಂದು ಕಾರ್ಯಕ್ರಮಗಳ ಹಾಗೂ ಅನುಭವಗಳು ನಾದನೂಪುರ ಡಿಜಿಟಲ್ ಪತ್ರಿಕೆಯ ಮೂಲಕ ಹಂಚಿಕೊಳ್ಳುತ್ತಾ ಹೋಗುವೆ. ಈ ಮೂಲಕ ಕಲೆ ಹಾಗೂ ಮಾಧ್ಯಮವನ್ನು ಬೆಸೆಯುವ ಕೊಂಡಿಯಾಗಿ ನಾದನೂಪುರ ಪತ್ರಿಕೆ ನಿಲ್ಲಲಿದೆ. ಹೊಸ ಪ್ರಸಂಗ ಸಮರ್ಥ ತಂಡ, ಹಾಗೂ ಹೊಸ ಧ್ಯೇಯೋದ್ದೇಶಗಳೊಂದಿಗೆ ತಲೆಯೆತ್ತಿ ನಿಂತಿರುವ ಟ್ರಸ್ಟ್ ಗೆ ಹೊಸ ದಿಕ್ಕೊಂದನ್ನು ನೀವು ತೋರಿಸಬೇಕು. ಅದೇ ನಿರೀಕ್ಷೆಯಲ್ಲಿ ಮತ್ತೆ ಸಿಗೋಣ ಇನ್ನೊಂದು ವೇದಿಕೆಯಲ್ಲಿ.

## ಸಂಪಾದಕೀಯ



ಅಜಿತ್ ಕಾರಂತ್
ಗೌರವ ಸಂಪಾದಕರು

ಆತ್ಮೀಯ ಓದುಗರೆ, ಎಲ್ಲರಿಗೂ ಪ್ರೀತಿಪೂರ್ವಕ ನಮಸ್ಕಾರಗಳು.

ಇದು ಪತ್ತನಾಜೆ ಯ ಸಮಯ. ಹೆಜ್ಜೆಗಳ ಮೇಲಡರಿದ ಗೆಜ್ಜೆಗಳು ಪೆಟ್ಟಿಗೆ ಸೇರುವ ಸಮಯ. ಈ ಪೆಟ್ಟಿಗೆ ಇತ್ತೀಚಿನ ವರ್ಷಗಳಲ್ಲಿ ಮುಚ್ಚಲ್ಪಡದೇ, ಮಳೆಗಾಲದ ಅವಧಿಯಲ್ಲೂ ಉಲಿಯುವ ಅವಕಾಶ ಒದಗಿದ್ದು ಅನೇಕ ಕಲಾವಿದರ ಕುಟುಂಬಪೋಷಣೆಗೆ ಸಹಕಾರಿಯಾದ ಸಂಗತಿ. ಮೊದಲೆಲ್ಲಾ ಕಲಾವಿದ ಈ ಬಿಡುವಿನ ಅವಧಿಯಲ್ಲಿ ಕೃಷಿಯಲ್ಲಿಯೂ, ಅಧ್ಯಯನದ ಕೃಷಿಯಲ್ಲಿಯೂ ತೊಡಗಿ ಮುಂದಿನ ತಿರುಗಾಟದ ಸಿದ್ಧತೆಮಾಡಿಕೊಳ್ಳಲು ಅನುವು ದೊರೆಯುತ್ತಿತ್ತು. ಈಗ ಹಾಗಲ್ಲ. ಅನೇಕ ಯಕ್ಷಗಾನ ಪ್ರದರ್ಶನಗಳೂ, ತಾಳಮದ್ದಲೆಗಳೂ, ಗಾನವೈಭವಗಳೂ ಸಾಲುಸಾಲಾಗಿ ವಿಜೃಂಭಿಸುವ ಈ ಕಾಲದಲ್ಲಿ ಭಾಗವತನ ಸ್ಥಾನಮಾನದತ್ತ ನಮ್ಮ ಚಿತ್ತ. ಯಕ್ಷಗಾನದ ಮೊದಲನೇ ವೇಷಧಾರಿಯೆಂದೂ, ಕಥಾಸೂತ್ರಧಾರನೆಂದೂ ಗುರುತಿಸಲ್ಪಡುವ ಭಾಗವತನ ಸ್ಥಾನ ಅತ್ಯಂತ ಜವಾಬ್ದಾರಿಯದಾಗಿರುತ್ತದೆ. ಓರ್ವ ಕವಿಯ ಯಕ್ಷಕಾವ್ಯವನ್ನು ರಂಗಪ್ರದರ್ಶನಕ್ಕೆ ಅಣಿಗೊಳಿಸುವ ಕರ್ತವ್ಯ ಭಾಗವತನದ್ದು. ಕಥೆ ಹೀಗೆಯೇ ಸಾಗಬೇಕು, ಪಾತ್ರಗಳ ವೈವಿಧ್ಯತೆ ಹೀಗೆಯೇ ಇರಬೇಕು, ಈ ಸಮಯಕ್ಕೆ ಇಂತಹಾ ರಸೋತ್ಪತ್ತಿಯೇ ಆಗಬೇಕು, ಕಥಾವೇಗ ಹೀಗೆಯೇ ಸಾಗಬೇಕು ಎಂಬಿತ್ಯಾದಿ ನಿರ್ದೇಶನವನ್ನು ಕೇವಲ ತನ್ನ ಪದ್ಯದೊಂದಿಗೇ ಮಾಡುತ್ತಾ, ಪ್ರತೀಪಾತ್ರವೂ ತಾನಾಗಿ ಅನುಭವಿಸುತ್ತಾ ಆ ಅನುಭವದ ರಸವನ್ನು ಪ್ರೇಕ್ಷಕನಿಗೆ ಉಣಬಡಿಸುವ ಶ್ರೇಷ್ಠ ಬಾಣಸಿಗನೀತ. ಹದತಪ್ಪಿದರೆ ರುಚಿ ಕೆಡುತ್ತದೆ. ಮೆದುವಾದರೆ ಶುಚಿ ಹಾಳಾಗುತ್ತದೆ. ಕಲಾವಿದನೊಬ್ಬ ತನ್ನ ಪಾತ್ರದೊಳಗೆ ತಾನು ಪ್ರವೇಶಿಸಿದರಾಯ್ತು.ಆದರೆ ಭಾಗವತ? ಹಾಗಲ್ಲ... ಎಲ್ಲಾ ಪಾತ್ರಗಳೂ ತಾನಾಗಬೇಕು.. ಅಂತಹಾ ಪರಕಾಯ ಪ್ರವೇಶದ ಮಹಾನ್ ಭಾಗವತನನ್ನು ಯಕ್ಷಪ್ರಪಂಚ ಕಳೆದ ಶತಮಾನದಲ್ಲಿ ಕಂಡಿತ್ತು. ಅವರೇ ಕೀರ್ತಿಶರೀರಿಗಳಾದ ಗುಂಡ್ಮಿ ಕಾಳಿಂಗನಾವುಡ. ದೇಹ ಮರೆಯಾಗಿ 32 ವತ್ಸರಗಳು ಸಂದರೂ ಅವರ ಸ್ವರ ಅಜರಾಮರ. ಪದ್ಯಗಳು ನಿತ್ಯಾನುರಣನಗೊಂಡು ಜನಮಾನಸದಲ್ಲಿ ನೀಲಗಗನದೊಳು ಮೇಘಗಳ ಕಂಡ ನವಿಲ ನರ್ತನದಂತೆ ಇಂದಿಗೂ ಕುಣಿಯುತ್ತಿವೆ, ಕುಣಿಸುತ್ತಿವೆ.ಇದು ಓರ್ವ ಕಲಾವಿದನ ನಿಜವಾದ ಬದುಕು. ಇಂತಹಾ ಮೇರುಭಾಗವತನ ಆತ್ಮಕ್ಕೆ ಶಾಂತಿಕೋರುವ ನಮ್ಮ ಬಳಗ ಸಾದರದಿಂದ ಈ ಸಂಚಿಕೆಯನ್ನು ಆ ಮಹಾಚೇತನಕ್ಕೆ ಸಮರ್ಪಿಸಿ ಕೃತಾರ್ಥವಾಗುತ್ತಿದೆ.

**ನಿಮಗಿದು ಗೊತ್ತೇ?** 1. 1790 ರಲ್ಲಿ ಧರ್ಮಸ್ಥಳದ ಪಟ್ಟಕ್ಕೆ ಬಂದ ಕುಮಾರಯ್ಯ ಹೆಗ್ಗಡೆಯವರು ಹಾಗೂ ಮೈಸೂರು ಸಂಸ್ಥಾನವನ್ನು ಆಳುತ್ತಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು (181–1868) ಸ್ನೇಹಿತರಾಗಿದ್ದು ಧರ್ಮಸ್ಥಳ ಮೇಳವನ್ನು ಮೊದಲ ಬಾರಿಗೆ ಮೈಸೂರಿಗೆ ಕರೆಸಿದರು. ಮೈಸೂರಿನಲ್ಲಿ ಮೊದಲ ಬಾರಿಗೆ ಯಕ್ಷಗಾನ ಪ್ರದರ್ಶಿಸಿದ ಕೀರ್ತಿ ಧರ್ಮಸ್ಥಳ ಮೇಳಕ್ಕೆ ಸಲ್ಲುತ್ತದೆ. ಮೈಸೂರಿನವರಾದ ಅಳಿಯ ಲಿಂಗರಾಜರು ಯಕ್ಷಗಾನ ಕಲಾವಿದರೂ ಆಗಿದ್ದು, ಪ್ರಸಂಗಗಳನ್ನು ಬರೆದಿದ್ದಾರೆ. (ಮಾಹಿತಿ– ಅಕ್ಷರ ಪತ್ರಿಕೆ)

2. ಶಿವಪಂಚಾಕ್ಷರಿ ಮಹಾತ್ಮೆ ಪ್ರಸಂಗ ಬರೆದ ಕಿರಿಕ್ಕಾಡು ವಿಷ್ಣು ಭಟ್ಟರನ್ನು 1981 ಮೇ 16 ರಂದು ಬದಿಯಡ್ಕದಲ್ಲಿ ಸನ್ಮಾನಿಸಿ ಯಕ್ಷಗಾನದ ಕುಲಪತಿ ಎಂದು ಗೌರವಿಸಲಾಗಿತ್ತು. ಅವರು ಬರೆದ ಆತ್ಮಕಥೆಯ ಹೆಸರು ಯಕ್ಷರಸ ಜೀವನ ಎಂಬುದಾಗಿದೆ. ಇದೇ ಸಂದರ್ಭ ಯಕ್ಷಗಾನದ ಮೊದಲ ಕವಿಗೋಷ್ಠಿ ನಡೆದಿತ್ತು

## ಕಾಳಿಂಗ ನಾವಡರು ಸೃಷ್ಟಿಸಿದ ಭಾಗವತಿಕೆಯ ಹೊಸ ಮಾರ್ಗ



ಪ್ರೊ ಎಸ್ ವಿ ಉದಯ್ ಕುಮಾರ್ ಶೆಟ್ಟಿ

ಯಕ್ಷಗಾನ ಭಾಗವತಿಯಲ್ಲಿ ಕ್ರಾಂತಿ ಮೂಡಿಸಿದ 30 ವರ್ಷದ ಹಿಂದೆ ನಮ್ಮನ್ನಗಲಿದ, ಯಕ್ಷಗಾನ ಭಾಗವತಿಕೆಯ ಯುಗ ಪ್ರವರ್ತಕ ಕಾಳಿಂಗ ನಾವಡರು ಯಕ್ಷಗಾನ ಭಾಗವತಿಕೆಗೆ ಹೊಸದೊಂದು ಶೈಲಿಯನ್ನು ಹುಟ್ಟು ಹಾಕಿದವರು. ತಮ್ಮ ಕಂಚಿನ ಕಂಠದಿಂದ ಹೊಸ ಹೊಸ ಯಕ್ಷಗಾನೇತರ ರಾಗಗಳನ್ನು ಪರಿಚಯಿಸಿದ ಇವರು ಭೈರವಿ, ಮಧ್ಯಮಾವತಿ, ಮೋಹನ, ಬಿಲಹರಿ, ಸಾವೇರಿ ಕಾಂಬೋದಿ, ಮುಂತಾದ ಹಳೆಯ ರಾಗಗಳಿಗೆ ಹೊಸ ಸಂಚಾರ ನೀಡಿದವರು. ಚಾಂದ್, ಬೇಹಾಗ್, ಬಹುದಾರಿ, ಚಾರುಕೇಶಿ, ಅಬೇರಿ, ರೇವತಿ ಮುಂತಾದ ಯಕ್ಷಗಾನದಲ್ಲಿ ಬಳಕೆಯಾಗದ ರಾಗಗಳನ್ನು ಬಳಸಿಕೊಂಡು ಯಕ್ಷಗಾನಕ್ಕೆ ಹೊಸ ಹಿಮ್ಮೇಳಾಸಕ್ತರನ್ನು ಮುಖ್ಯವಾಗಿ ಯುವ ಪ್ರೇಕ್ಷಕರನ್ನು ತನ್ನತ್ತ ಸೆಳೆದುಕೊಂಡರು, ನಾಗಶ್ರೀ ಪ್ರಸಂಗದ ನೀಲ ಗಗನದೊಳು ಮೇಘಗಳು, ಚೆಲುವೆ ಚಿತ್ರಾವತಿಯ ಧರಣಿಮಂಡಲ ಮಧ್ಯದೊಳಗೆ, ಚೈತ್ರಪಲ್ಲವಿಯ ರಾಗಾನುರಾಗಿಣಿ, ಮುಂತಾದ ಹೊಸ ಮಾದರಿಯ ಪದ್ಯಗಳನ್ನು ಹೊಸ ಹೊಸ ರಾಗದಲ್ಲಿ ನರಂಜಿಸುವಂತೆ  ಹಾಡುತಿದ್ದರು. ನಾವಡರು ಹೇಗೆ ತನ್ನ ಗುರುಗಳಾದ ನಾರ್ಣಪ್ಪ ಉಪ್ಪೂರರ ಮಾರ್ವಿ



ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಜೊತೆ ಕಾಳಿಂಗ ನಾವಡರು (ಮೂಲ– ವಿಕಿ ಸೋರ್ಸ್)

ಶೈಲಿಯ ಭಾಗವತಿಕೆ ಮತ್ತು ತಂದೆ ರಾಮಚಂದ್ರ ನಾವಡರ ಕುಂಜಾಲು ಶೈಲಿಯನ್ನು ಸಮರ್ಥವಾಗಿ ಬಳಸಿಕೊಂಡರು ಎನ್ನುವುದು ಅವರ ಹೊಸ ಶೈಲಿಯ ಉಗಮಕ್ಕೆ ಕಾರಣವಾಯಿತು. ಆರಂಭದಲ್ಲಿ ಗುರು ನಾರ್ಣಪ್ಪ ಉಪ್ಪೂರರ ಶೈಲಿಯಲ್ಲಿ ಹಾಡುತಿದ್ದ ಅವರು ಕ್ರಮೇಣ ತಂದೆಯವರ ಕುಂಜಾಲು ಶೈಲಿಗೆ ಹೊರಳಿಕೊಂಡರು. ಆಗ ಮಾರ್ವಿ ಹಾಗು ಕುಂಜಾಲು ಶೈಲಿಯ ಸುಂದರ ಸಂಗಮವಾಗಿ ಹೊಸ ಶೈಲಿಯ ಉಗಮವಾಯಿತು ಅದೇ ನಾವಡರ ಶೈಲಿ. ಇಂದು ಅನೇಕರು ಕುಂಜಾಲು ಶೈಲಿಯಲ್ಲಿ ಹಾಡಿದರೆ ಉಪ್ಪೂರರ ಶೈಲಿಯಲ್ಲಿ ಹಾಡಲಾರರು. ಉಪ್ಪೂರರ ಶೈಲಿಯ ಭಾಗವತರು ಕುಂಜಾಲು ಶೈಲಿಯಲ್ಲಿ ಹಾಡಲಾರರು. ನಾವಡರಂತಹ ಕೆಲವೇ ಕೆಲವರಿಗೆ ಮಾತ್ರ ಇದು ಸಾಧ್ಯವಾಗಿದೆ. ನಾವಡರು ಅತಿಯಾಗಿ ಮೆಚ್ಚುತ್ತಿದ್ದ ಕರ್ಣಾರ್ಜುನ ಕಾಳಗ, ದೌಪದಿ ಪ್ರತಾಪ, ಕ್ರಷ್ಣಾರ್ಜುನ, ರತಿ ಕಲ್ಯಾಣ, ಮೀನಾಕ್ಷಿ ಕಲ್ಯಾಣ, ಜಾಂಬವತಿ ಕಲ್ಯಾಣಕ್ಕೆ ಹೆಚ್ಚು ಪ್ರಚಲಿತವಿದ್ದ ಕುಂಜಾಲು ಶೈಲಿಯನ್ನೂ, ಚೂಡಾಮಣಿ–ರಾಮಾಂಜನೇಯ–ಭಸ್ಮಾಸುರ ಮುಂತಾದ ಪ್ರಸಂಗಗಳಿಗೆ ಮಾರ್ವಿ ಶೈಲಿಯನ್ನೂ ಬಳಸುತಿದ್ದರು. ಕುಂಜಾಲು ಶೇಷಗಿರಿ ಕಿಣಿಯವರಿಂದ ಪ್ರಾರಂಭಗೊಂಡ ಕುಂಜಾಲು ಶೈಲಿಯನ್ನು ನೀಲಾವರ ರಾಮಕೃಷ್ಣಯ್ಯ, ಗೋರ್ಪಾಡಿ ವಿಠಲ ಪಾಟೀಲ್, ಜಾನುವಾರುಕಟ್ಟೆ ಭಾಗವತರು, ಮರಿಯಪ್ಪಾಚಾರ್ ಸಮರ್ಥವಾಗಿ ರೂಢಿಸಿಕೊಂಡರು. ಅದೇ ಪರಂಪರೆಯಲ್ಲಿ ಹಾಡಿ ಮಂದಾರ್ತಿ ಮೇಳದಲ್ಲಿ ಕುಂಜಾಲು ಶೈಲಿಯ ಪ್ರಾತಿನಿಧಿಕ ಭಾಗವತರು ನಾವಡರ ತಂದೆ ರಾಮಚಂದ್ರ ನಾವಡರು. ಇಲ್ಲಿ ಚಾಲು ಕುಣಿತಗಳು ಕಡಿಮೆ ಇದ್ದು ಮದ್ದಳೆಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಇರಲಿಲ್ಲ. ತಂದೆ ಶ್ರೀನಿವಾಸ ಉಪ್ಪೂರರಿಂದ ಬಳುವಳಿಯಾಗಿ ಬಂದ ಮಾರ್ವಿ ಶೈಲಿಯನ್ನು ಸಮರ್ಥವಾಗಿ ಬಳಸಿಕೊಂಡ ನಾರ್ಣಪ್ಪ ಉಪ್ಪೂರರು ಮದ್ದಳೆಗಾರ ಬೇಳಂಜೆ ತಿಮ್ಮಪ್ಪ ನಾಯ್ಕರು ಮತ್ತು ದುರ್ಗಪ್ಪ ಗುಡಿಗಾರರೊಂದಿಗೆ ಯಕ್ಷಗಾನ ಭಾಗವತಿಕೆಗೆ ಹೊಸ ಆವಿಷ್ಕಾರ ಮಾಡಿದರು. ಕುಣಿತದಲ್ಲಿ ನಿಪುಣರಾದ ಕೆರೆಮನೆ ಕಲಾವಿದರು ಚಿಟ್ಟಾಣಿಯವರು ವೀರಭದ್ರ ನಾಯ್ಕರು ಶಿರಿಯಾರ ಮಂಜುನಾಯ್ಕರು ಕೋಟ ವೈಕುಂಠ ಮುಂತಾದವರು ಈ ಶೈಲಿಯನ್ನು ಸಮರ್ಥವಾಗಿ ರಂಗದಲ್ಲಿ ತೋರ್ಪಡಿಸಿದರು. ಉಪ್ಪೂರರ ಶೈಲಿಯಲ್ಲಿ ಅಭಿನಯಕ್ಕೆ ಹೆಚ್ಚು ಅವಕಾಶ ಇರುವುದರಿಂದ ಉತ್ತರ ಕನ್ನಡದ ಕಲಾವಿದರು ಇದನ್ನು ಹೆಚ್ಚು ನೆಚ್ಚಿಕೊಂಡರು. ಶೇಷಗಿರಿ ಕಿಣಿ ಮತ್ತು ರಾಮಚಂದ್ರ ನಾವಡರ ಕುಂಜಾಲು ಶೈಲಿಯಲ್ಲಿ ಆಲಾಪಣೆಯ ಸೊಬಗಿದೆ. ಇಲ್ಲಿ ಹಿರಿಯಡ್ಕ ಗೋಪಾಲರಾಯರು, ಸುರಗಿಕಟ್ಟೆ ಬಸವಗಾಣಿಗರು ಪದ್ಯಕ್ಕಷ್ಟೇ ಮದ್ದಳೆ ನುಡಿಸುತಿದ್ದರು. ಹಾಗಾಗಿ ಇವೆರಡು ಬೇರೆ ಬೇರೆ ಶೈಲಿಗಳು. ಕಾಳಿಂಗ ನಾವಡರ ಇನ್ನೊಂದು ವಿಶೇಷ ಕಪ್ಪು ಮೂರರ ಶ್ರುತಿಗಿಂತಲೂ ಮೇಲೆ ಹಾಡಬಲ್ಲರು ಬಿಳಿ ಎರಡರ ಕೆಳಗೂ ಹಾಡಬಲ್ಲರು. ಕೆಲವರಿಗೆ ಏರು ಶ್ರುತಿ ಹೊರತು ಇಳಿಯಲ್ಲಿ ಹಾಡಲಾರರು ಇನ್ನು ಕೆಲವರು ಏರುಶ್ರುತಿಯಲ್ಲಿ ಹಾಡಲಾರರು. ಮಾರ್ವಿ ಶೈಲಿಯನ್ನು ತೆಂಕುತಿಟ್ಟಿನ ಬಲಿಪರ ಶೈಲಿಗೆ ಹೋಲಿಸಬಹುದು. ಕುಂಜಾಲು ಶೈಲಿಯಲ್ಲಿ ಕರ್ನಾಟಕಿ ಸಂಗೀತದ ಛಾಯೆ ಇದೆ. ನಾವಡರು ಗುರುಗಳ ಮಾರ್ವಿ ಶೈಲಿಯನ್ನು ಬಳಸಿಕೊಂಡು ಕರ್ನಾಟಕಿ ಸಂಗೀತದ ಲೇಪ ಮಾಡಿ ಹೊಸ ಶೈಲಿಗೆ ಕಾರಣೀಕರ್ತರಾದರು. ಉಪ್ಪೂರರು ತನ್ನ ಅಪೂರ್ವವಾದ ಬಾಯಿತಾಳದ ಮೂಲಕ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೋಟ ವೈಕುಂಠ, ಎಂ.ಎ.ನಾಯ್ಕ, ಮುಂತಾದ ಅನೇಕ ಕಲಾವಿದರಲ್ಲಿ ಹುದುಗಿದ್ದ ಪ್ರತಿಭೆಯನ್ನು ಹೊರಗೆಳೆದರೆ ನಾವಡರು ಐರೋಡಿ ಗೋವಿಂದಪ್ಪ ರಾಮನಾಯರಿ, ಅರಾಟೆ ಮಂಜುನಾಥ, ಶಿರಿಯಾರ ಮಂಜ್‌ನಾಯ್ಕ್, ಬಳ್ಕೂರ ಕೃಷ್ಣ ಯಾಜಿ, ಕೊಂಡದಕುಳಿ, ಗೋಪಾಲ ಆಚಾರ್ಯ, ಕಿನ್ನಿಗೋಳಿ, ಹಳ್ಳಾಡಿ, ಜಲವಳ್ಳಿ, ನಗರ ಜಗನ್ನಾಥ ಶೆಟ್ಟಿ, ಕುಮ್ಟಾ ಗೋವಿಂದ ನಾಯಕ್ ಮುಂತಾದವರ ಪ್ರಸಿದ್ದಿಗೆ ಕಾರಣರಾದರು. ಕರ್ಣಾರ್ಜುನ ಕಾಳಗ, ದೌಪದಿ ಪ್ರತಾಪ, ಜಾಂಬವತಿ ಕಲ್ಯಾಣ ಮುಂತಾದ ಪ್ರಸಂಗಗಳಲ್ಲಿ ಅವರ ಪದ್ಯ ಜಾನುವಾರುಕಟ್ಟೆಯವರ ಪದ್ಯವನ್ನು ಹೋಲುತ್ತಿರುವುದನ್ನು ಗಮನಿಸಬಹುದು. ಆದರೆ ನಾವಡರ ಹೊಸ ಶೈಲಿ ಬಡಗುತಿಟ್ಟಿನ ಇನ್ನೊಂದು ಮೂರನೇ ಹೊಸ ಶೈಲಿ ಎಂದು ಎಲ್ಲಿಯೂ ದಾಖಲಾಗದಿದ್ದದ್ದು ಯಕ್ಷಗಾನದ ದೌರ್ಭಾಗ್ಯ ಸರಿ.

## ಕಲಾವಿದರಿಗೆ ತುರ್ತು ನಿಧಿ: ಯಕ್ಷಗಾನ ಕಲಾವಿದರು ಸಂಕಷ್ಟಕ್ಕೆ ಒಳಗಾದಾಗ ಸಹಾಯ ಹಸ್ತ ನೀಡಬೇಕಾದುದು ಯಾರು?

***ಕಳೆದ ಸಂಚಿಕೆಯಿಂದ ...***



ಎಂ ಶಾಂತಾರಾಮ

ಇತ್ತಿಚೆಗೆ 6 ವರ್ಷಗಳ ಹಿಂದೆ ಸ್ಥಾಪನೆಗೊಂಡ, ಸುಪ್ರಸಿದ್ಧ ಯಕ್ಷಗಾನ ಭಾಗವತರಾದ ಶ್ರೀ ಪಟ್ಲ ಸತೀಶ್ ಶೆಟ್ಟರ ಅಧ್ಯಕ್ಷತೆಯ "ಯಕ್ಷಧ್ರುವ ಪಟ್ಲ ಫೌಂಡೇಷನ್ (ರಿ) ಮಂಗಳೂರು ಇಂದು ಯಕ್ಷಗಾನ ಕಲಾವಿದರ ಪಾಲಿಗೆ ಆಶಾಕಿರಣವಾಗಿ ಗುರುತಿಸಿಕೊಂಡಿದೆ. ತಮ್ಮ ಜನಪ್ರಿಯತೆಯನ್ನು ವೈಯಕ್ತಿಕವಾಗಿ ಬಳಸಿಕೊಳ್ಳದೇ, ಅದನ್ನು  ಯಕ್ಷಗಾನ ಕಲಾವಿದರಿಗಾಗಿ ಉಪಯೋಗಿಸಿಕೊಳ್ಳುತ್ತಿರುವ ಪಟ್ಲ ಸತೀಶ್ ಶೆಟ್ಟರ ಕಾರ್ಯವೈಖರಿ ಜನಮೆಚ್ಚುಗೆ ಗಳಿಸಿದೆ . ಯಕ್ಷಗಾನ ಕಲಾವಿದರ ಪಾಲಿನ "ಕಾಮಧೇನು" ಎನಿಸಿದ ಪಟ್ಲ ಭಾಗವತರ ಸಾರಥ್ಯದ ಈ ಟ್ರಸ್ಟ್ ಅಲ್ಪ ಕಾಲದಲ್ಲೇ ಸ್ತುತ್ಯಾರ್ಹ ಸಾಧನೆ ಮಾಡಿದೆ. ಅಶಕ್ತ ಯಕ್ಷಗಾನ ಕಲಾವಿದರಿಗೆ ವಸತಿ ಸೌಕರ್ಯ, ವೈದ್ಯಕೀಯ ಚಿಕಿತ್ಸೆ, ಧನಸಹಾಯ, ಕಲಾವಿದರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವಲ್ಲಿ ಮುಂಚೂಣಿಯಲ್ಲಿದೆ. ಕೇವಲ 6 ವರ್ಷಗಳ ಅವಧಿಯಲ್ಲಿ 7.5. ಕೋಟಿ ರೂಪಾಯಿಗಳನ್ನು, ವಿವಿಧ ಯೋಜನೆಗಳ ಮೂಲಕ ಯಕ್ಷಗಾನ ಕಲಾವಿದರಿಗೆ ನೀಡಿ ದಾಖಲೆ ನಿರ್ಮಿಸಿದೆ .ಈಗಾಗಲೇ ಆರು ಮಂದಿ ಕಲಾವಿದರಿಗೆ ಉಚಿತವಾಗಿ ಮನೆ ಕಟ್ಟಿಕೊಟ್ಟದ್ದಲ್ಲದೇ ಮುಂದಿನ ದಿನಗಳಲ್ಲಿ ಪಟ್ಲ ಯಕ್ಷಾಶ್ರಯ ಯೋಜನೆ " ಯ ಮೂಲಕ 100 ಮಂದಿ ಯಕ್ಷಗಾನ ಕಲಾವಿದರಿಗೆ ಉಚಿತ ವಸತಿ ನಿರ್ಮಾಣ ಮಾಡುವ ಉದ್ದೇಶ ಹೊಂದಿದೆ. ಸುಮಾರು 800 ಮಂದಿ ಯಕ್ಷಗಾನ ಕಲಾವಿದರಿಗೆ ವಿಮಾ ಸೌಲಭ್ಯ ಒದಗಿಸಿದ ಕಾರಣ, ಈ ಯೋಜನೆಯ ಮೂಲಕ ಹಲವಾರು ಕಲಾವಿದರ ಕುಟುಂಬವು ಫಲಾನುಭವಿಯಾಗಿ ಲಾಭ ಪಡೆದಿದೆ. ಯಕ್ಷಗಾನ ಕಲಾವಿದರು ಅಸೌಖ್ಯರಾದಾಗ, ನಿಧನ ಹೊಂದಿದಾಗ ಪಟ್ಲ ಫೌಂಡೇಶನ್ ಕ್ಷಿಪ್ರವಾಗಿ ಸ್ಪಂದಿಸಿ ನೆರವನ್ನು ನೀಡಿದೆ. ನೂರಾರು ಯಕ್ಷಗಾನ ಕಲಾವಿದರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಿದೆ. ಪ್ರತೀವರ್ಷ ಯೋಗ್ಯ ಕಲಾವಿದರನ್ನು ಗುರುತಿಸಿ ಪಟ್ಲ ಪ್ರಶಸ್ತಿಯೊಂದಿಗೆ ಒಂದು ಲಕ್ಷ ಮೊತ್ತದ ಗೌರವ ಧನ ನೀಡಿದೆ. ಹವ್ಯಾಸಿ ಯಕ್ಷಗಾನ ಕಲಾವಿದರನ್ನೂ ಈ ವ್ಯಾಪ್ತಿಗೆ ಹೊಂದಿಸಿದ ಸಾಧನೆ ಪಟ್ಲ ಫೌಂಡೇಶನ್ ದ್ದು. ಪಟ್ಲ ಭಾಗವತರ ಈ ಎಲ್ಲಾ ಕಾರ್ಯಯೋಜನೆಗಳಿಗೆ ಬೆನ್ನೆಲುಬಾಗಿ ಹಲವಾರು ದಾನಿಗಳ ಕಾಣಿಕೆಯೂ ಸಂದಿದೆ. ಒಳ್ಳೆಯ ಕಾರ್ಯ ವಿಧಾನವನ್ನು ಯಕ್ಷಗಾನ ಅಭಿಮಾನಿಗಳು ಪ್ರೋತ್ಸಾಹಿಸುತ್ತಾರೆ ಎಂಬುದನ್ನು ಪಟ್ಲ ಭಾಗವತರು ತೋರಿಸಿಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಮೂಲದ, ಧರ್ಮಸ್ಥಳ ಹಾಗು ಬಡಗು ತಿಟ್ಟಿನಲ್ಲಿ ಸುಪ್ರಸಿದ್ಧ ಸ್ತ್ರೀ ಪಾತ್ರಧಾರಿಯಾಗಿದ್ದ, ಡಾ. ಬೇಗಾರು ಶಿವಕುಮಾರ್ ರು ಪ್ರಸ್ತುತ ಕಳೆದ 20 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. “ಗಾನ ಸೌರಭ ಯಕ್ಷಗಾನ ಶಾಲೆ (ರಿ) ಬೆಂಗಳೂರು" ಎಂಬ ಹೆಸರಿನ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಯಕ್ಷಗಾನ ಕಲಾವಿದರಿಗೆ ಎಲೆಮರೆಯ ಕಾಯಿಯಂತೆ ನೆರವಾಗುತ್ತಿದ್ದಾರೆ. ಯಾವುದೇ ಪ್ರಚಾರ ಬಯಸದೇ, ತಾವು ನೀಡಿದ ಸಹಾಯವನ್ನು ಯಾರಿಗೂ ತಿಳಿಸಬೇಕಾಗಿಲ್ಲ ಎಂಬ ಮನವಿಯೊಂದಿಗೆ, ಸಂಕಷ್ಟದಲ್ಲಿರುವ ಯಕ್ಷಗಾನ ಕಲಾವಿದರು ತಮ್ಮ ಗಮನಕ್ಕೆ ಬಂದ ಕೂಡಲೇ, ಸದ್ದಿಲ್ಲದೇ ಸಹಾಯ ಮಾಡುತ್ತಿದ್ದಾರೆ. ಪ್ರತೀ ತಿಂಗಳು ಓರ್ವ ಅಶಕ್ತ ಕಲಾವಿದರಿಗೆ ಸಹಾಯ ಧನ ನೀಡುತ್ತಿರುವುದು ನನ್ನ ಗಮನಕ್ಕೆ ಎಂದೋ ಬಂದಿದೆ. ಅದೆಷ್ಟೋ ಬಾರಿ ಶಿವಕುಮಾರ್ ರು ನನಗೆ ಕರೆ ಮಾಡಿ ಅಶಕ್ತ ಕಲಾವಿದರ ಮಾಹಿತಿ ಪಡೆದು ಧನಸಹಾಯವನ್ನು ಒದಗಿಸಿದ್ದಾರೆ. ಆವಾಗಲೆಲ್ಲಾ "ಕುಡ್ವರೇ, ಇದನ್ನೆಲ್ಲಾ

ವೇದಿಕೆಗೆ ಹಾಕಬೇಡಿ "ಎಂದು ವಿನಯಪೂರ್ವಕವಾಗಿ ಹೇಳುತ್ತಿದ್ದರೂ, ಶಿವಕುಮಾರ್ ರಿಗೆ ಇದು ಸಹ್ಯವಾಗದಿದ್ದರೂ ದಾಖಲೀಕರಣದ ದೃಷ್ಟಿಯಿಂದ ಈ ಬಗ್ಗೆ ಉಲ್ಲೇಖಿಸದಿದ್ದರೆ ಇತಿಹಾಸಕ್ಕೆ ಅಪಚಾರ ಮಾಡಿದಂತಾದೀತು ಎಂಬ ನಿಲುವಿನಿಂದ ಈ ಬಗ್ಗೆ ಬರೆಯುತ್ತಿದ್ದೇನೆ. ಪ್ರಚಾರ ಬಯಸದೇ ಯಕ್ಷಗಾನ ಕಲಾವಿದರಿಗೆ ನೆರವಾಗುತ್ತಿರುವ ಅಪರೂಪದ ಕಲಾವಿದರು ಡಾ.ಬೇಗಾರು ಶಿವಕುಮಾರ್. ಶ್ರೀ ಕ್ಷೇತ್ರ ಧರ್ಮಸ್ಥಳದ ಖಾವಂದರಾದ ಡಾ. ವೀರೇಂದ್ರ ಹೆಗ್ಗಡೆಯವರೂ ಯಕ್ಷಗಾನ ಕಲಾವಿದರ ನೆರವಿಗೆ ಸದಾ ಒದಗಿ ಬರುವವರು. ಯಕ್ಷಗಾನ ಕಲಾವಿದರ ಬಗ್ಗೆ ವಿಶೇಷವಾದ ಅಭಿಮಾನ ತೋರುವವರು ಖಾವಂದರು. ಯಕ್ಷಗಾನ ಪೋಷಕರಾದ ಟಿ.ಶಾಮ ಭಟ್, ಹೈದರಾಬಾದ್ ನಲ್ಲಿ ನೆಲೆಸಿರುವ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜರು, ಮುಂಬೈನ ಅಜೆಕಾರು ಬಳಗದವರು, ಮೂಡುಬಿದಿರೆಯ ವೇದಮೂರ್ತಿ ಈಶ್ವರ ಭಟ್ ಮುಂತಾದವರೂ ಕಲಾವಿದರ ನೆರವಿಗೆ ಒದಗುವವರು. ಯಕ್ಷಗಾನ ಕಲಾವಿದರ ಆರೋಗ್ಯದ ಬಗ್ಗೆ ಮಂಗಳೂರಿನ ಕೆ.ಎಂ.ಸಿ.ಆಸ್ಪತ್ರೆಯ ಡಾ. ಪದ್ಮನಾಭ ಕಾಮತರ ಕಾಳಜಿಯನ್ನೂ ಹೇಳಲೇಬೇಕು. ಯಕ್ಷಗಾನ ಕಲಾವಿದರಿಗೆ ವಿಶೇಷವಾದ ಆದ್ಯತೆ ನೀಡಿ ಶುಶ್ರೂಷೆ ನೀಡುತ್ತಿರುವವರು. (ಈ ಸಾಲಿನಲ್ಲಿ ಇನ್ನೂ ಅದೆಷ್ಟೋ ಯಕ್ಷಗಾನ ಪೋಷಕರಿದ್ದರೂ ಸ್ಥಳಾಭಾವದ ಕಾರಣ ಉಲ್ಲೇಖಿಸಲಿಲ್ಲವೇ ಹೊರತು ಅಂತಹವರನ್ನು ನಾನು ಮರೆತಿದ್ದೇನೆಂದು ತಿಳಿಯಬಾರದು ಎಂಬುದಾಗಿ ವಿನಮ್ರ ವಿನಂತಿ ) ಅದೆಷ್ಟೋ ಸಂಘ – ಸಂಸ್ಥೆಗಳು ಯಕ್ಷಗಾನ ಕಲಾವಿದರಿಗಾಗಿ ಶ್ರಮಿಸುತ್ತಿದೆ. ಹುಬ್ಬಳ್ಳಿಯ "ರಂಗಮಿತ್ರರು", ಮೂಡಬಿದಿರೆಯ "ಯಕ್ಷಸಂಗಮ" ಸಹಿತ ನೂರಾರು ಸಂಘಸಂಸ್ಥೆಗಳು ಯಕ್ಷಗಾನ ಕಲಾವಿದರನ್ನು ಗುರುತಿಸಿ ನೆರವು ನೀಡುತ್ತಿವೆ. ಎಲ್ಲಾ ಸಂಘಸಂಸ್ಥೆಗಳನ್ನು ಇಲ್ಲಿ ಸ್ಥಳಾಭಾವದ ಕಾರಣ ಹೆಸರಿಸಲಾಗಿಲ್ಲ. ಹಲವಾರು ಯಕ್ಷಗಾನ ಅಭಿಮಾನಿಗಳು ವೈಯಕ್ತಿಕ ನೆಲೆಯಲ್ಲಿ ಯಕ್ಷಗಾನ ಕಲಾವಿದರಿಗೆ ನೆರವಾಗುತ್ತಿದ್ದಾರೆ. ಕೆನರಾ ಬ್ಯಾಂಕ್ ನ ಉದ್ಯೋಗಿ ಶ್ರೀ ಕಟೀಲು ಕೃಷ್ಣಮೂರ್ತಿ ಭಟ್ ರವರು " ಯಕ್ಷಚೈತನ್ಯ – ಅಶ್ವತ್ಥಪುರ " ಸಂಘದ ಮೂಲಕ ಹಲವಾರು ವರ್ಷಗಳಿಂದ ಓರ್ವ ಅಶಕ್ತ ಕಲಾವಿದರಿಗೆ ಉತ್ತಮ ಮೊತ್ತದ ಸಹಾಯ ಧನ ನೀಡಿ ಗೌರವಿಸುವ ಪರಿಪಾಟ ಬೆಳೆಸಿದ್ದಾರೆ. ಇಂತಹ ಉದಾರ ದಾನಿಗಳು ನೂರಾರು ಮಂದಿ ಇದ್ದಾರೆ.

***1 ಅಕಸ್ಮಿಕ ತೊಂದರೆಗಳಾದಾಗ ಕಲಾವಿದರ ನೆರವಿಗೆ ಒದಗುವಂತಹ ಸಹಾಯ ಧನದ ವ್ಯವಸ್ಥೆಯ ಅವಶ್ಯಕತೆ ಎಷ್ಟರ ಮಟ್ಟಿಗಿದೆ?***

ಕಲಾವಿದನೊಬ್ಬ ಆಕಸ್ಮಿಕ ತೊಂದರೆಗೊಳಗಾದರೆ ಸಹಾಯಧನದ ಅನಿವಾರ್ಯತೆ ಬಹಳಷ್ಟಿದೆ. ಯಾಕೆಂದರೆ ಹೆಚ್ಚಿನ ಯಕ್ಷಗಾನ ಕಲಾವಿದರು ಯಕ್ಷಗಾನ ಕಲೆಯನ್ನೇ ನಂಬಿ ಬದುಕುವವರು. ಅವರು ಬೇರೆ ಕೆಲಸದಲ್ಲಿ ತೊಡಗಿಸಿಕೊಳ್ಳಲು ಗೊತ್ತಿಲ್ಲದೇ ಇರುವುದರಿಂದ ಇದೇ ಕಲೆಯನ್ನು ಅವರು ನೆಚ್ಚಿಕೊಂಡಿದ್ದಾರೆ. ಅವರನ್ನು ಅವಲಂಬಿಸಿ ಅವರ ಕುಟುಂಬವೂ ಇರುವುದರಿಂದ ಅವರಿಗೆ ಸಂಕಷ್ಟ ಎದುರಾದಾಗ ಸಹಾಯಧನದ ಅವಶ್ಯಕತೆ ಖಂಡಿತ ಇದೆ

***2 ಕಲಾವಿದನೊಬ್ಬ ದಿಕ್ಕೆಟ್ಟ ಸಂದರ್ಭದಲ್ಲಿ ಸೂಕ್ತ ಕಾಲದಲ್ಲಿ ಸಹಾಯ ಹಸ್ತ ಸ್ಪಂದನೆ ದೊರಕಿದ್ದಿದೆಯಾ?***

ಹಲವರಿಗೆ ಸಕಾಲದಲ್ಲಿ ನೆರವು ದೊರಕಿದೆ. ಕಲಾವಿದ ಎಷ್ಟರಮಟ್ಟಿಗೆ ತನ್ನ ಕಲಾ ಸೇವೆಯಿಂದ ಕಲಾರಾಧಕರ ಮನಸಿನಲ್ಲಿ ಸ್ಥಾನ ಪಡೆದಿದ್ದಾನೆ ಎನ್ನುವುದನ್ನು ಅವಲಂಬಿಸಿ ಸ್ಪಂದನೆ ದೊರಕಿದೆ, ಅನೇಕರು ಸೇವೆ ಅಂತ ಭಾವಿಸಿ ತೊಡಗಿಸಿಕೊಂಡಾಗ ಸಹಾಯ ಹಸ್ತ ಲಭಿಸಿದೆ. ಕಲಾಭಿಮಾನಿಗಳು ಸ್ಪಂದನೆಯನ್ನು ನೀಡಿದ್ದಾರೆ, ಮತ್ತು ಮುಂದೆಯೂ ನೀಡುತ್ತಾರೆ ಎಂಬ ನಂಬಿಕೆ ಇದೆ

***3 ಕಲಾವಿದರೇ ಸಂಘಟಿತರಾಗಿ ತಮ್ಮದೇ ಸಂಕಷ್ಟ ಪರಿಸ್ಥಿತಿಗೆ ತುರ್ತು ನಿಧಿ ವ್ಯವಸ್ಥೆಯನ್ನು, ಯಾವ ರೀತಿ ರೂಪಿಸಿಕೊಳ್ಳಬೇಕಾದೀತು?***

ಕಲಾವಿದರೇ ಸಂಘಟಿತರಾಗಿ ತುರ್ತ ನಿಧಿಯನ್ನು ರೂಪಿಸಿಸಿಕೊಳ್ಳಬೇಕು ಎನ್ನುವುದು ಉತ್ತಮ ಯೋಚನೆ. ಆದರೆ ಯಾವ ರೀತಿ ರೂಪಿಸಿಕೊಳ್ಳಬೇಕು ಎಂಬುದಕ್ಕೆ ಸ್ಪಷ್ಟ ಉತ್ತರ ಕಂಡುಕೊಳ್ಳುವುದು ಕಷ್ಟ. ಈಗಾಗಲೇ ಕೆಲವು ಸಂಘ ಸಂಸ್ಥೆಗಳು, ಫೌಂಡೇಷನ್ ಗಳು ಕಲಾವಿದರ ಸಂಕಷ್ಟ ಪರಿಸ್ಥಿತಿಗೆ ಶಕ್ತಿ ಮೀರಿ ಪ್ರಯತ್ನಿಸ್ತಾ ಇವೆ. ಆಯಾಯ ಮೇಳಗಳ ಯಜಮಾನರು ತಮ್ಮದೇ ಸಾಧ್ಯತೆಯ ಮಿತಿಯಲ್ಲಿ ಸ್ಪಂದಿಸ್ತಾ ಇದ್ದಾರೆ. ಈ ಕೆಲಸವನ್ನು ಸದ್ಯಕ್ಕೆ ಕಲಾರಂಗ ವ್ಯವಸ್ಥಿತ ರೀತಿಯಲ್ಲಿ ಮಾಡುತ್ತಿದೆ.

***ಪ್ರತಿಕ್ರಿಯೆ – ವಾದಿರಾಜ ಕಲ್ಲೂರಾಯ, ಕಟೀಲು ಮೇಳದ ಕಲಾವಿದರು ಹಾಗೂ ಉಪನ್ಯಾಸಕರು.***

***1 ಅಕಸ್ಮಿಕ ತೊಂದರೆಗಳಾದಾಗ ಕಲಾವಿದರ ನೆರವಿಗೆ ಒದಗುವಂತಹ ಸಹಾಯ ಧನದ ವ್ಯವಸ್ಥೆಯ ಅವಶ್ಯಕತೆ ಎಷ್ಟರ ಮಟ್ಟಿಗಿದೆ?***

ಕಲಾವಿದ ತೊಂದರೆಗಳಿಗೆ ಸಿಲುಕಿದಾಗ ಪೂರ್ಣಪ್ರಮಾಣದ ಕಲಾವಿದ (ಅನ್ಯ ವೃತ್ತಿ ಇಲ್ಲದವ) ನಿಗೆ ಸಹಾಯದ ಹಸ್ತವನ್ನು ಸುಸಂಸ್ಕೃತ ಸಮಾಜ ಇದನ್ನು ಮಾಡಬೇಕು ಮಾಡುತ್ತಿದೆ.

***2 ಕಲಾವಿದನೊಬ್ಬ ದಿಕ್ಕೆಟ್ಟ ಸಂದರ್ಭದಲ್ಲಿ ಸೂಕ್ತ ಕಾಲದಲ್ಲಿ ಸಹಾಯ ಹಸ್ತ ಸ್ಪಂದನೆ ದೊರಕಿದ್ದಿದೆಯಾ?***

ಅಸಾಯಕನಾಗಿ ಸಮಾಜದತ್ತ ನೋಡುವ ಪ್ರತಿ ವ್ಯಕ್ತಿಗೂ ಸಹಾಯ ಸಹಕಾರ ಸಿಗುತ್ತಾ ಇದೆ. ಅದರಲ್ಲೂ ಕಲಾವಿದನಿಗೆ ಅವನದ್ದೇ ಅಭಿಮಾನಿ ವರ್ಗ ಇರುವುದು ಒಂದು ಉತ್ತಮ ಬೆಳವಣಿಗೆ (ಅವರೂ ಕಾಳಜಿ ವಹಿಸುತ್ತಾರೆ) ಅವನ ಕಲಾ ಕೊಡುಗೆಯನ್ನು ಸಮಾಜ ಗುರುತಿಸಿ ಸಹಾಯ ನೀಡುತ್ತಿದೆ.

***3 ಕಲಾವಿದರೇ ಸಂಘಟಿತರಾಗಿ ತಮ್ಮದೇ ಸಂಕಷ್ಟ ಪರಿಸ್ಥಿತಿಗೆ ತುರ್ತು ನಿಧಿ ವ್ಯವಸ್ಥೆಯನ್ನು ಯಾವ ರೀತಿ ರೂಪಿಸಿಕೊಳ್ಳಬೇಕಾದೀತು?***

ಇದು ಸ್ವಲ್ಪ ಜಟಿಲ ವಿಷಯ. ಕಲಾವಿದರು ಸಂಘಟಿತರಾಗುವುದೇ ಯಕ್ಷಪ್ರಶ್ನೆ. ಒಟ್ಟಾಗಬಹುದು ಎಂಬ ಪೂರ್ಣ ವಿಶ್ವಾಸವೂ ಇಲ್ಲ ಕಾರಣ ಕಲಾವಿದ ಪೂರ್ಣ ತೃಪ್ತನಲ್ಲ ಒಂದಲ್ಲ ಒಂದು ಸಮಸ್ಯೆ ಆತನಿಗೆ ಇದ್ದೇ ಇದೆ (ಕಲಾವಿದನ ಪ್ರಪಂಚವೇ ಬೇರೆ) ಸೀಮಿತ ಸಂಪಾದನೆ (ಸಂಪಾದನೆಗೆ ಅಡ್ಡ ದಾರಿ ಇಲ್ಲ ಇದ್ದರೂ ಗೊತ್ತಿಲ್ಲ) ಇದ್ದ ಸಂಪಾದನೆಯಲ್ಲಿ ಬದುಕು ಕಟ್ಟಿ ಕೊಳ್ಳುವುದು ಸ್ವಾಭಿಮಾನಿ ಕಲಾವಿದನಿಗೆ ಬಲು ಕಷ್ಟವೇ ಸರಿ. ಸಾಧ್ಯತೆ ಕನಿಷ್ಠ 10 ಮಂದಿ ಸಮಾನ ಮನಸ್ಕ ಕಲಾವಿದರು ಒಟ್ಟು ಸೇರಿ ಸಹಕಾರಿ ತತ್ವದಡಿ ಕಲಾವಿದರ ಸಹಕಾರಿ ಸಂಘ ಹುಟ್ಟು ಹಾಕಿ ಅದರ ಸದಸ್ಯರಾದ ಕಲಾವಿದರಿಗೆ ಅಲ್ಪ ಬಡ್ಡಿ ಮೂಲಕವೋ ಶೂನ್ಯ ಬಡ್ಡಿ ಮೂಲಕವೋ ಅಪತ್ತಿಗೆ ಸಾಲ ನೀಡಿ ಸಹಕರಿಸಬಹುದು. ಈ ಚಿಂತನೆಯನ್ನು ಅನುಷ್ಠಾನ ಕ್ಕೆ ತರುವ ಬಗ್ಗೆ ಒಂದೆರಡು ವರುಷಗಳ ಹಿಂದಿನಿಂದ ಯೋಚಿಸುತ್ತಿದ್ದೇನೆ.

***ಪ್ರತಿಕ್ರಿಯೆ – ಸರಪಾಡಿ ಅಶೋಕ ಶೆಟ್ಟಿ***

***1 ಅಕಸ್ಮಿಕ ತೊಂದರೆಗಳಾದಾಗ ಕಲಾವಿದರ ನೆರವಿಗೆ ಒದಗುವಂತಹ ಸಹಾಯ ಧನದ ವ್ಯವಸ್ಥೆಯ ಅವಶ್ಯಕತೆ ಎಷ್ಟರ ಮಟ್ಟಿಗಿದೆ?***

ಕಲೆ ವಿಶ್ವವ್ಯಾಪಿಯಾಗಿದೆ. ಪ್ರದರ್ಶನಗಳ ಸಂಖ್ಯೆಯೂ ವಿಪುಲವಾಗಿದೆ. ಆದರೆ ಶೇ. 80 ಮಂದಿ ಕಲಾವಿದರ ಬದುಕು ಬಡತನದಲ್ಲಿದೆ. ಅಂದಾಜು ಶೆ. 10 ಮಂದಿ ಕಲಾವಿದರು ಮಾತ್ರ ಯಕ್ಷಗಾನದ ಫಸಲನ್ನು ಉಣ್ಣುತ್ತಿದ್ದಾರೆ. ಉಳಿದ ಕಲಾವಿದ ಪಾಲಿಗೆ ಅದು ಮೃಗ ಮರೀಚಿಕೆಯಾಗಿದೆ. ಇದಕ್ಕೆ ಕಾರಣ ಒಂದೆಡೆ ಪ್ರೇಕ್ಷಕರ ಅಭಿರುಚಿಯಾದರೆ ಇನ್ನೊಂದೆಡೆ ಅಪ್ರಸಿದ್ಧ ಕಲಾವಿದರನ್ನು ಸಾರಾಸಗಟಾಗಿ ತಿರಸ್ಕರಿಸುವ ಸಂಘಟಕರೂ ಕಾರಣರಾಗಿದ್ದಾರೆ. ಆದುದರಿಂದ ಕಲೆಯಲ್ಲಿ ಬದುಕು ಕಟ್ಟಿಕೊಳ್ಳುತ್ತಿರುವ ಸಮರ್ಥ ಕಲಾವಿದರನೇಕರು ಅವಕಾಶ ವಂಚಿತರಾಗಿ ಬಡವರಾಗಿರಬೇಕಾದುದು ಅನಿವಾರ್ಯ. ವೃತ್ತಿ ಕಲಾವಿದರ ತಂಡವೇ ಕಲೆಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರಧಾರಿಗಳು. ಅವರೇ ಬಡತನದಲ್ಲಿ ಬದುಕು ಕಳೆಯಬೇಕಾದುದು ವಿಷಾದನೀಯ. ಇಂತಹಾ ಕಲಾವಿದರಿಗಾಗಿ ಉದಾರಿಗಳ ಸಹಾಯ ಧನದ ಅವಶ್ಯಕತೆ ಖಂಡಿತ ಇದೆ.

***2 ಕಲಾವಿದನೊಬ್ಬ ದಿಕ್ಕೆಟ್ಟ ಸಂದರ್ಭದಲ್ಲಿ ಸೂಕ್ತ ಕಾಲದಲ್ಲಿ ಸಹಾಯ ಹಸ್ತ ಸ್ಪಂದನೆ ದೊರಕಿದ್ದಿದೆಯಾ?***

ಕೆಲವರಿಗೆ ಸಿಕ್ಕಿದೆ. ಹಲವರಿಗೆ ಸಿಕ್ಕಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಆಸ್ಪತ್ರೆ ಸೇರಿದ ಸಂದರ್ಭದಲ್ಲಿ ಶಾಂತಾರಾಮ ಕುಡ್ವರು ತಕ್ಷಣ ನೆರವಿನ ಹಸ್ತ ಚಾಚಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಲಾಭಿಮಾನಿಗಳು ನೀಡಿದ ಸಹಾಯ, ಸ್ಪಂದನೆ ತೀರಾ ವಿರಳ. ತೀರಾ ಅಪ್ರಸಿದ್ದ ಕಲಾವಿದನಾದರೆ ಆತನ ಅವಗಣನೆ ಇನ್ನೂ ಹೆಚ್ಚು. ಹಾಗೆಂದು ಔದಾರ್ಯದಿಂದ ಕೈ ನೀಡುವವರೂ ಇಲ್ಲದಿಲ್ಲ. ಆದರೆ ಸಂಖ್ಯೆ ಕಡಿಮೆ.

***3 ಕಲಾವಿದರೇ ಸಂಘಟಿತರಾಗಿ ತಮ್ಮದೇ ಸಂಕಷ್ಟ ಪರಿಸ್ಥಿತಿಗೆ ತುರ್ತು ನಿಧಿ ವ್ಯವಸ್ಥೆಯನ್ನು, ಯಾವ ರೀತಿ ರೂಪಿಸಿಕೊಳ್ಳಬೇಕಾದೀತು?***

ಕಲಾವಿದರ ಸಂಘಟನೆಗೆ ಕಲಾವಿದರ ಪ್ರತಿಕ್ರಿಯೆ ಸಾಲದು. ಕಲಾವಿದರ ವೃತ್ತಿಪರತೆಯನ್ನು ಸರಕಾರವಿನ್ನೂ ಅಂಗೀಕರಿಸಿದಂತಿಲ್ಲ. ಅಸಂಘಟಿತ ಕಾರ್ಮಿಕರ ವ್ಯಾಪ್ತಿಯ ಒಳಗೂ ಅವರಿಲ್ಲ. ಮೇಳಗಳಲ್ಲಿ ಇಂದಿಗೂ ಕಲಾವಿದರು ದಿನಗೂಲಿ ನೌಕರರು. ಕಲಾವಿದರ ಪ್ರವೃತ್ತಿ ಅವರ ಸಂಘಟನೆಗೆ ಮಾರಕವಾಗಿದೆ. ಆದುದರಿಂದ ಸದ್ಯಕ್ಕಂತು ಕಲಾವಿದರ ಸಂಘ ಸ್ಥಾಪನೆಯಾಗಿ ಅದು ತನ್ನ ಹಕ್ಕುಗಳನ್ನು ಸರಕಾರದ ಮುಂದೆ ಸ್ಥಾಪಿಸಬಹುದಾದ ಲಕ್ಷಣವೂ ಇಲ್ಲ. ಕಲಾವೃತ್ತಿಯೇ ಪರಾಶ್ರಯದಿಂದ ಬಾಳುತ್ತಿದೆ. ಆದುದರಿಂದ ಬಡ ಕಲಾವಿದರು ಆಪತ್ಕಾಲದಲ್ಲಿ ಉದಾರಿಗಳೆಡೆ ಆರ್ದ ನೋಟವನ್ನು ಬೀರುವುದಷ್ಟೇ ಸದ್ಯಕ್ಕೆ ಉಳಿದಿರುವ ದಾರಿ. ಕರಾವಳಿಗೆ ಮಾತ್ರ ಸೀಮಿತವಾಗಿರುವ ಯಕ್ಷಗಾನ ಕಲಾವೃತ್ತಿಯ ಸಮಸ್ಯೆಯನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಡುವವರಾರು? ಕಲಾವಿದರು ಒಟ್ಟಾಗುವವರೆಗೆ ಇದು ಪರಿಹಾರ ಕಾಣದ ಸಮಸ್ಯೆಯಾಗಿಯೇ ಉಳಿಯಬಹುದು. ***ಪ್ರತಿಕ್ರಿಯೆ – ತಾರಾನಾಥ ವರ್ಕಾಡಿ, ಯಕ್ಷಗಾನ ಕಲಾವಿದರು, ಗುರುಗಳು, ಪ್ರಸಂಗಕರ್ತರು, ವಿಮರ್ಶಕರು, "ಬಲ್ಲಿರೇನಯ್ಯ" ಪತ್ರಿಕಾ ಸಂಪಾದಕರು***

***1 ಅಕಸ್ಮಿಕ ತೊಂದರೆಗಳಾದಾಗ ಕಲಾವಿದರ ನೆರವಿಗೆ ಒದಗುವಂತಹ ಸಹಾಯ ಧನದ ವ್ಯವಸ್ಥೆಯ ಅವಶ್ಯಕತೆ ಎಷ್ಟರ ಮಟ್ಟಿಗಿದೆ?***

ಬಹಳಷ್ಟು ಇದೆ.ಅದಕ್ಕೊಂದು ಸರಿಯಾದ ಕಾನೂನಾತ್ಮಕವಾಗಿ ವ್ಯವಸ್ಥೆ ಆಗುವುದು ಒಳ್ಳೆಯದು.

***2 ಕಲಾವಿದನೊಬ್ಬ ದಿಕ್ಕೆಟ್ಟ ಸಂದರ್ಭದಲ್ಲಿ ಸೂಕ್ತ ಕಾಲದಲ್ಲಿ ಸಹಾಯ ಹಸ್ತ ಸ್ಪಂದನೆ ದೊರಕಿದ್ದಿದೆಯಾ?***

ಬಹಳ ಕಡಿಮೆ.ಕಲಾವಿದನಿಗೆ ಭದ್ರತೆಯೇ ಇಲ್ಲ.ಅವನು ರಂಗದಲ್ಲಿ ಮೆರೆಯುವಾಗ ಮಾತ್ರ... ಇಲ್ಲವಾದಲ್ಲಿ ಅವನು ದುಡಿದ ಸಂಸ್ಥೆಯೂ ಇಲ್ಲ, ಅವನನ್ನು ಪ್ರೋತ್ಸಾಹಿಸಿದ ಅಭಿಮಾನಿಗಳೂ ಇಲ್ಲ. ಸ್ವಲ್ಪ ಮಟ್ಟಿಗೆ ಕಲಾರಂಗ ಸಹಾಯಮಾಡುತ್ತದೆ. ಪಟ್ಲ ಫೌಂಡೇಷನ್ ಕಲಾವಿದರಿಗೆ ಸ್ವಲ್ಪ ಉಸಿರು ಬಿಡುವಂತಾಯಿತು.ಕಲಾವಿದರನ್ನು ಬಹಳಷ್ಟು ಆಧರಿಸಿದೆ.

***3 .ಕಲಾವಿದರೇ ಸಂಘಟಿತರಾಗಿ ತಮ್ಮದೇ ಸಂಕಷ್ಟ ಪರಿಸ್ಥಿತಿಗೆ ತುರ್ತು ನಿಧಿ ವ್ಯವಸ್ಥೆಯನ್ನು ಯಾವ ರೀತಿ ರೂಪಿಸಿಕೊಳ್ಳಬೇಕಾದೀತು?***

ಮಾಡಿದ್ರೆ ಬಹಳ ಒಳ್ಳೆಯದು. ಕಲಾವಿದರ ಒಕ್ಕೂಟ ಆದ್ರೆ ಕಲಾವಿದನಿಗೊಂದು ಧೈರ್ಯ.ಆದ್ರೆ ಇದು ಆಗದೆ ಇರುವಲ್ಲಿ ಕಲಾವಿದರೆ ಬಹ್ವಂಶ ಕಾರಣ. ಕಲಾವಿದರು ಸಂಘಟಿತರಾಗುವುದೇ ಕಷ್ಟ.

***ಪ್ರತಿಕ್ರಿಯೆ – ಗಣೇಶ್ ಶೆಟ್ಟಿ, ಕನ್ನಡಿಕಟ್ಟೆ, ಕಟೀಲು ಮೇಳದ ಕಲಾವಿದರು***

## ಯಕ್ಷಗಾನದೊಳಗೊಂದು ಡಿಜಿಟಲ್ ಕ್ರಾಂತಿ



*ರವಿ ಮಡೋಡಿ*

ಯಕ್ಷಗಾನ ನಮ್ಮ ನಾಡಿನ ಸಾಂಸ್ಕೃತಿಕ ಸಲ್ಲಕ್ಷಣಗಳಲ್ಲಿ ಒಂದು. ಬಹು ಹಿಂದೆ ಎತ್ತಿನಗಾಡಿ ಅಥವಾ ತಲೆಯ ಮೇಲೆ ಪೆಟ್ಟಿಗೆಯನ್ನು ಹೊತ್ತು ಊರಿನಿಂದ ಊರಿಗೆ ತಿರುಗಾಟ ಮಾಡಿ, ಗದ್ದೆ, ಬಯಲಿನಲ್ಲಿ ರಂಗಸ್ಥಳವನ್ನು ಕಟ್ಟಿಕೊಂಡು, ಸಾವಿರಾರು ಮನಸ್ಸುಗಳಿಗೆ ನಿತ್ಯವೂ ಕಲಾ ಸಾಕ್ಷಾತ್ಕಾರವನ್ನು ಉಣಬಡಿಸುತ್ತಿರುವ ಈ ಮಾಧ್ಯಮ ನೂರಾರು ವರುಷಗಳಿಂದ ಬೆಳೆಯುತ್ತಲೇಯಿದೆ. ಇದಕ್ಕೆ ಪೂರಕವಾಗಿ ಹಳ್ಳಿಗರು ತಲೆತಲೆಮಾರುಗಳ ಕಾಲದಿಂದ ಇದನ್ನು ಬೆಳೆಸಿದರು, ಪೋಷಿಸಿದರು. ಕನ್ನಡ ಶ್ರೇಷ್ಠ ಸಾಹಿತಿಗಳಾದ ಡಾ.ಶಿವರಾಮ ಕಾರಂತರಂತವರು ಈ ಕಲೆಯ ಸಾಧ್ಯತೆ ಮತ್ತು ಸಾಮರ್ಥ್ಯವನ್ನು ಗುರುತಿಸಿ, ಅದಕ್ಕೆ ತಮ್ಮದೇಯಾದ ಆಯಾಮಗಳನ್ನು ನೀಡಿದರು. ಹೀಗೆ ಸಾಗಿ ಬಂದಿರುವ ಕಲೆ ಯಾವತ್ತು ಕೂಡ ತನ್ನನ್ನು ತಾನು ಸೀಮಿತಗೊಳಿಸಿಕೊಳ್ಳದೇ, ವಿಸ್ತರಿಸಿಕೊಳ್ಳುತ್ತ, ಕಾಲಕ್ಕೆ ತಕ್ಕಂತೆ ಹರವಿಕೊಳ್ಳುತ್ತ, ಚಲನಶೀಲ ಗುಣವನ್ನು ಹೊಂದಿದ್ದರಿಂದಲೇ ಅದು ಈ ಹೊತ್ತಿಗೂ ಕೂಡ ಪ್ರಸ್ತುತವಾಗಿದೆ. ಹಿಲಾಲು ಬೆಳಕಿನಿಂದ ಹೆಲೋಜಿನ್ ಬೆಳಕಿನವರೆಗೆ, ಬಯಲಿನಿಂದ ರಂಗಸ್ಥಳದವರೆಗೆ ಬೆಳೆದಿರುವುದು ಇಂದಿನ ಅಗತ್ಯಕ್ಕೆ ಹೊಂದಿಕೊಳ್ಳುತ್ತಿರುವುದಕ್ಕೆ ಸಾಕ್ಷಿ ಎನಿಸುತ್ತದೆ. ಎರಡು ವರುಷಗಳ ಹಿಂದೆ ಜಗತ್ತಿಗೆ ಉಂಟಾದ ಮಹಾಮಾರಿ ಕರೋನದ ಮಹಾಘಾತ ಎಲ್ಲರ ಬದುಕನ್ನು ತಲ್ಲಣಗೊಳಿಸಿರುವುದು ಸುಳ್ಳಲ್ಲ. ಇದರ ದುರಿತಕ್ಕೆ ಒಳಗಾದ ಇಡೀ ಸಾಂಸ್ಕೃತಿಕ ಲೋಕ, ಅದರ ಹತಿಯಿಂದ ಎದ್ದೇಳುವುದಕ್ಕೆ ಸಾಧ್ಯವಾಗದೇ ನಲುಗಿ ಹೋಗಿತ್ತು. ಈ ಪರಿಸ್ಥಿತಿಯಲ್ಲಿ ಕಳೆದ ಎರಡು ವರುಷಗಳಲ್ಲಿ ಯಕ್ಷಗಾನದಲ್ಲಿ ಉಪೋದ್ಘಾತವಾದ ಶೋಧನಾ ಮಾರ್ಗಗಳು, ಭವಿಷ್ಯದ ಯಕ್ಷಗಾನವನ್ನು ರೂಪಿಸುವುದಕ್ಕೆ ಸನ್ನದ್ಧವಾಗಿರುವಂತಿದೆ. ಕಲಾವಿದನ ಬದುಕೇ ಹಾಗೆ. ತನ್ನೊಳಗಿನ ಸುಪ್ತ ಪ್ರತಿಭೆಯನ್ನು ಸದಾ ಪ್ರದರ್ಶಿಸುವುದಕ್ಕೆ ಹಪಹಪಿಸುತ್ತಿರುತ್ತಾನೆ. ಆದರೆ ಕರೋನ ಕಾಲದಲ್ಲಿ ಅಂತಹ ಅವಕಾಶಗಳು ದೊರೆಯದೆ ಮಾನಸಿಕವಾಗಿ ಜರ್ಜರಿತನಾಗಿದ್ದ. ರಂಗಮಂದಿರಗಳು ಬಂದ್ ಆಗಿದ್ದವು, ಮೇಳಗಳನ್ನು ನಿಲ್ಲಿಸಬೇಕಾಗಿತ್ತು, ಜನರ ಸಂಚಾರವಿರಲಿಲ್ಲ. ನೂರಾರು ಕೋಟಿ ವಹಿವಾಟನ್ನು ನಡೆಸುತ್ತಿದ್ದ ಕಲಾ ಜಗತ್ತು, ಒಮ್ಮೆಲೆ ನಿಂತು, ಇದನ್ನೇ ನಂಬಿದ್ದವರ ಬದುಕು ತಲ್ಲಣಗೊಂಡಿದ್ದವು. ಇದು ಕಲಾವಿದರ ಸ್ಥಿತಿಯಾದರೆ, ಕರೋನದ ಬಗೆಗಿನ ಋಣಾತ್ಮಕ ಮಾತುಗಳು, ಆಪ್ತರ ಅಗಲುವಿಕೆ ಇತ್ಯಾದಿ ಕಾರಣದಿಂದ ನೊಂದಿದ್ದ ಪ್ರೇಕ್ಷಕರು ಅದರಿಂದ ಹೊರಬರಲು ಮಾರ್ಗಗಳನ್ನು ನೋಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಯಕ್ಷಗಾನದಂತಹ ರಂಗಮಾಧ್ಯಮವನ್ನು ಡಿಜಿಟಲ್ ಮಾಧ್ಯಮವಾಗಿ ನೋಡುವ ಪ್ರಯೋಗಕ್ಕೆ ಚಾಲನೆ ದೊರೆಯಿತು. ಯಾವುದೋ ಸ್ಥಳದಲ್ಲಿ ಕಾರ್ಯಕ್ರಮಗಳನ್ನು ನಡೆಸಿ, ಅಲ್ಲಿಂದ ನೇರವಾಗಿ ಸಾಮಾಜಿಕ ಜಾಲತಾಣದ ಮೂಲಕವಾಗಿ ಪ್ರಸಾರ ಮಾಡುತ್ತ, ಹೊಸ ದಾರಿಯನ್ನು ಪ್ರೇಕ್ಷಕರಿಗೆ ತೋರಿಸಿದರು. ಅನಿವಾರ್ಯ ಸ್ಥಿತಿಯಲ್ಲಿದ್ದ ಸಿದ್ಧ ಪ್ರೇಕ್ಷಕರು ಇದನ್ನು ಒಪ್ಪಿ ಅಪ್ಪಿ ಮುನ್ನಡೆಸಿದರು. ಮುಕ್ತವಾಗಿ ಅದನ್ನು ಸ್ವೀಕರಿಸುತ್ತ ಪ್ರೋತ್ಸಾಹಿಸಿದರು. ಈ ಬೆಳವಣಿಗೆಯಲ್ಲಿ ಕಳೆದ ಎರಡು ವರುಷಗಳಲ್ಲಿ ಸಾವಿರಾರು ಕಾರ್ಯಕ್ರಮಗಳು ಡಿಜಿಟಲ್ ವೇದಿಕೆಯಲ್ಲಿ ಸಂಪನ್ನವಾಗಿರುವುದು ಅದರ ಜನಪ್ರಿಯತೆಯನ್ನು ಸಾಕ್ಷೀಕರಿಸುತ್ತದೆ. ಇಂದು ಕರೋನ ಮರೆಯಾಗಿ ಎಲ್ಲರ ಬದುಕು ಎಂದಿನಂತೆ ಸಾಗುತ್ತಿದೆ. ಸಾಂಸ್ಕೃತಿಕ ಲೋಕದಲ್ಲಿ ಮತ್ತೆ ಕಾರ್ಯಕ್ರಮಗಳು ಆಯೋಜನೆಗೊಳ್ಳುತ್ತಿವೆ. ಜನರು ಕೂಡ ಎಂದಿನಂತೆ ಕಾರ್ಯಗಳಲ್ಲಿ ಖುದ್ದಾಗಿ ಭಾಗವಹಿಸುತ್ತಿದ್ದಾರೆ. ಆದರೆ ಇನ್ನು ಕೂಡ ಹೊರಗಿನ ಪ್ರೇಕ್ಷಕರು ಕಾರ್ಯಕ್ರಮದ ನೇರ ಪ್ರಸಾರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಯಸುತ್ತಿರುವುದು ಹೊಸ ಬೆಳವಣಿಯಾಗಿದೆ. ಈ ಕಾರಣಕ್ಕಾಗಿ ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯಕ್ರಮಗಳು ಇಂದಿಗೂ ಡಿಜಿಟಲ್ ಮಾಧ್ಯಮದಲ್ಲಿ ನೇರ ಪ್ರಸಾರವಾಗುತ್ತಿವೆ. ಜೊತೆಗೆ ಸಾಕಷ್ಟು ಒಳ್ಳೆಯ ಪ್ರೋತ್ಸಾಹವೂ ಸಿಗುತ್ತಿದೆ. ಈಗ ಸಂಘಟಕರು ತಮ್ಮ ಕಾರ್ಯಕ್ರಮವನ್ನು ನೋಡಿದವರ ಸಂಖ್ಯೆಯನ್ನು ಡಿಜಿಟಲ್ ಮಾಧ್ಯಮವನ್ನು ಸೇರಿಸಿ ಹೇಳಬೇಕಾಗಿದೆ. ಯಕ್ಷಗಾನದಲ್ಲಿ ಪ್ರದರ್ಶನಗಳನ್ನು ನೇರ ಪ್ರಸಾರ ಮಾಡುವ ಹಲವಾರು ಸಂಸ್ಥೆಗಳಿವೆ. ಕೋಸ್ಟಲ್ ಲೈವ್ಸ್, ನಮ್ಮ ಕುಡ್ಲ, 'ಮಲ್ಯಾಡಿ ಲೈವ್ಸ್' ಇತ್ಯಾದಿ ಸಂಸ್ಥೆಗಳು ದಿನನಿತ್ಯವೂ ಹಲವು ಕಾರ್ಯಕ್ರಮಗಳನ್ನು ಡಿಜಿಟಲ್ ಮಾಧ್ಯಮಗಳಲ್ಲಿ ಬಿತ್ತರಿಸುತ್ತಿವೆ. ಈ ಬಗ್ಗೆ 'ಮಲ್ಯಾಡಿ ಲೈವ್ಸ್' ಮುಖ್ಯಸ್ಥರಾದ ಪ್ರಶಾಂತ್ ಮಲ್ಯಾಡಿಯವರನ್ನು ಮಾತನಾಡಿಸಿದಾಗ, ಕಳೆದ ಎರಡು ವರುಷಗಳಲ್ಲಿ ಮುನ್ನೂರಕ್ಕೂ ಹೆಚ್ಚಿನ ಕಾರ್ಯಕ್ರಮಗಳನ್ನು ಡಿಜಿಟಲ್ ಮಾಧ್ಯಮದಲ್ಲಿ ಸಂಯೋಜಿಸಿರುವುದಾಗಿ ತಿಳಿಸುತ್ತಾರೆ. ಜೊತೆಗೆ ಅವರ ಚಾನೆಲ್ ನ ಅನಾಲಿಟಿಕ್ಸ್ ಈ ಮಾಧ್ಯಮದ ಸಾಧ್ಯತೆಗಳನ್ನು ನಮ್ಮ ಮುಂದೆ ಪೂರ್ಣವಾಗಿ ತೆರೆದಿಡುತ್ತದೆ. ಇದರ ಪ್ರಕಾರ ಇದುವರೆಗೆ ಅವರ ಚಾನೆಲ್ ನ್ನು ಒಂದು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ವೀಕ್ಷಿಸಿದ್ದಾರೆ (ಯ್ಯೂಟ್ಯೂಬ್, ಫೇಸ್ಬುಕ್ ಸೇರಿ). ಇದರಲ್ಲಿ ಯಕ್ಷಗಾನ ವಲಯಕ್ಕಿಂತ ಅಧಿಕ ಸಂಖ್ಯೆಯಲ್ಲಿ ಬೇರೆ ಊರಿನ, ಬೇರೆ ರಾಜ್ಯದ ಮತ್ತು ದೇಶದ ಪ್ರೇಕ್ಷಕರಿದ್ದಾರೆ ಎನ್ನುವುದು ಗಮನಾರ್ಹ ಸಂಗತಿಯಾಗಿದೆ. ಸುಮಾರು 30ಕ್ಕಿಂತ ಅಧಿಕ ದೇಶಗಳಿಂದ ಈ ಕಾರ್ಯಕ್ರಮಗಳನ್ನು ನೋಡಿದ್ದಾರೆ. ಯಕ್ಷಗಾನದಿಂದ ಅನೇಕ ವರುಷಗಳಿಂದ ದೂರವಿದ್ದ ಪ್ರೇಕ್ಷಕರು, ಇದುವರೆಗೂ ಯಕ್ಷಗಾನವನ್ನೇ ನೋಡದ ಪ್ರೇಕ್ಷಕರು, ಡಿಜಿಟಲ್ ಮಾಧ್ಯಮದಲ್ಲಿ ಯಕ್ಷಗಾನವನ್ನು ನೋಡಿ, ಅದರ ಪ್ರೇಕ್ಷಕರಾಗುತ್ತಿರುವುದನ್ನು ತಮ್ಮ ಕಾಮೆಂಟ್ಸ್ ಮೂಲಕವಾಗಿ ತಿಳಿಸುತ್ತಿದ್ದಾರೆ. 'ಮಲ್ಯಾಡಿ ಲೈವ್ಸ್' ಸಂಸ್ಥೆಯು ಸರಾಸರಿ 5 ಗಂಟೆಯ ಕಾರ್ಯಕ್ರಮವನ್ನು ಹೊಂದಿದ್ದರೆ, ಅದನ್ನು 3 ಗಂಟೆಗಿಂತಲೂ ಹೆಚ್ಚಿನ ಸರಾಸರಿಯಲ್ಲಿ ನೋಡಿದ್ದಾರೆ. ಈಗಾಗಲೇ ಸಂಸ್ಥೆಯೂ 50 ಸಾವಿರಕ್ಕೂ ಹೆಚ್ಚಿನ ಬಳಕೆದಾರರನ್ನು ಹೊಂದಿದ್ದು ಇವರಲ್ಲಿ 25–55 ವಯೋಮಾನದವರು ಶೇಕಡ 67ರಷ್ಟಿದ್ದಾರೆ. ಒಂದು ಸಂಸ್ಥೆಯ ಅನಾಲಿಟಿಕ್ಸ್ ಮಾತ್ರ. ಇಂತಹ ಮಾಹಿತಿಗಳು ಬೇರೆ ಬೇರೆ ಸಂಸ್ಥೆಗಳಿಂದಲೂ ಪಡೆದಾಗ ಡಿಜಿಟಲ್ ಮಾಧ್ಯಮದ ಗಾತ್ರ ಇನ್ನಷ್ಟು ಹಿರಿದಾಗಿ ಕಾಣಿಸುತ್ತದೆ. ಯಕ್ಷಗಾನದ ಡಿಜಟಲ್ ಮಾಧ್ಯಮಕ್ಕೆ ತನ್ನದೇಯಾದ ಸಾಧ್ಯತೆ, ಕುಂದುಕೊರತೆಗಳು, ಮಿತಿಗಳಿವೆ ಎಂಬುದನ್ನು ಯಾವಾಗಲೂ ಮರೆಯಬಾರದು. ಸಾಮಾನ್ಯವಾಗಿ ಕಲಾವಿದ ತನ್ನ ಪ್ರದರ್ಶನಗಳನ್ನು ಮಾಡುವಾಗ ಪ್ರೇಕ್ಷಕರ ಭಾವವನ್ನು, ಚಪ್ಪಾಳೆ, ಪ್ರೋತ್ಸಾಹವನ್ನು ನಿರೀಕ್ಷಿಸುತ್ತಾನೆ. ಅದನ್ನು ಗುರುತಿಸಿ, ಅದಕ್ಕೆ ತಕ್ಕಂತೆ ತನ್ನ ಪ್ರದರ್ಶನಗಳನ್ನು ಬದಲಾಯಿಸಿಕೊಳ್ಳುತ್ತ ಉತ್ಸಾಹವನ್ನು ಹೆಚ್ಚಿಸಿಕೊಳ್ಳುತ್ತಾನೆ. ಆದರೆ ಡಿಜಿಟಲ್ ಮಾಧ್ಯಮದಲ್ಲಿ ಪ್ರೇಕ್ಷಕರ ನಾಡಿಮಿಡಿತವನ್ನು, ಕಲಾವಿದರು ಆ ಕ್ಷಣದಲ್ಲಿ ಅರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಮಾಧ್ಯಮಕ್ಕೆ ಕಲಾವಿದ ಹೊಂದಿಕೊಳ್ಳಬೇಕಾಗಿದೆ. ಇಲ್ಲಿ ತಮ್ಮನ್ನು ನೋಡುವ ಕಣ್ಣುಗಳು ಕೇವಲ ಎದುರಿಗೆ ಕುಳಿತ ಪ್ರೇಕ್ಷಕರು ಮಾತ್ರವಲ್ಲದೇ, ಅಂಗೈಯಲ್ಲಿ ಜಂಗಮವಾಣಿಯನ್ನು ಹಿಡಿದವರು ಕೂಡ ಎನ್ನುವುದನ್ನು ಮರೆಯುವ ಹಾಗಿರುವುದಿಲ್ಲ. ಡಿಜಿಟಲ್ ಮಾಧ್ಯಮದಲ್ಲಿ ಇಂದು ಕಾರ್ಯಕ್ರಮವನ್ನು ನೋಡುವುದಕ್ಕೆ ತಪ್ಪಿದ್ದರೂ ನಾಳೆ ಮತ್ತೆ ನೋಡುವ ಅವಕಾಶ ಸಂಪನ್ನವಾಗುತ್ತಿದೆ. ಎಲ್ಲ ಕಾರ್ಯಕ್ರಮಗಳು ಭವಿಷ್ಯದ ದಾಖಲೆಗಳಾಗುತ್ತವೆ. ನೂರು ವರುಷದ ನಂತರವೂ ಕೂಡ ಇಂದಿನ ಕಾರ್ಯಕ್ರಮದ ಪ್ರೇಕ್ಷಕರಾಗುವುದಕ್ಕೆ ಸಾಧ್ಯವಿದೆ. ಈ ಬಗೆಯಲ್ಲಿ ಕೂಡ ಕಲಾವಿದರು ಯೋಚಿಸಬೇಕಿದೆ. ಇನ್ನಷ್ಟು ಸೂಕ್ಷ್ಮವಾಗಿ ಕಲಾಪ್ರದರ್ಶನಗಳನ್ನು ಮಾಡುವ ಅನಿವಾರ್ಯತೆ ಎದುರಾಗುತ್ತಿದೆ. ಯಕ್ಷಗಾನವು ದೃಶ್ಯ ಮಾಧ್ಯಮವಾಗಿರುವುದರಿಂದ ಎಷ್ಟು ಪರಿಣಾಮಕಾರಿಯಾಗಿ ಡಿಜಿಟಲ್ ಮಾಧ್ಯಮದಲ್ಲಿ ಯಕ್ಷಗಾನದ ವಾತಾವರಣವನ್ನು ಸೃಜಿಸುತ್ತದೆ ಎನ್ನುವುದು ಚರ್ಚೆಯ ವಿಷಯ. ಇದರ ಜೊತೆಗೆ ಈ ಮಾಧ್ಯಮದ ಮೂಲಕವಾಗಿ ಯಕ್ಷಗಾನವು ಹೊರ ಪ್ರಪಂಚಕ್ಕೆ ಇನ್ನಷ್ಟು ಹತ್ತಿರವಾಗುತ್ತಿರುವುದರಿಂದ ಪ್ರೇಕ್ಷಕರ ವಸ್ತುನಿಷ್ಠ ಅಭಿಪ್ರಾಯವನ್ನು, ನೋಡುವ ರೀತಿಯನ್ನು ಕೂಡ ಅವಲೋಕಿಸಬೇಕಿದೆ. ಹಿಂದೆಲ್ಲ ಕಲಾವಿದರ ತಮ್ಮ ಪ್ರದರ್ಶನಗಳನ್ನು ತಾವೇ ವಿಮರ್ಶಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಸಾಕಷ್ಟು ಸಮಯ ಪ್ರಬುದ್ಧತೆಯನ್ನು ಸಾಧಿಸುವುದಕ್ಕೆ ಬೇಕಾಗಿತ್ತು. ಆದರೆ ಈಗ ಡಿಜಿಟಲ್ ಮಾಧ್ಯಮದ ಕಾರಣದಿಂದ ತನ್ನ ಪ್ರದರ್ಶನಗಳನ್ನು ತಾನೇ ನೋಡಿಕೊಂಡು ಸ್ವಯಂ ವಿಮರ್ಶೆಯನ್ನು ಮಾಡಿಕೊಳ್ಳಬಹುದಾಗಿದೆ. ಜೊತೆಗೆ ಪ್ರೇಕ್ಷಕರ ಭಾವ ಏನೆಂದು ಎಂದು ಅರಿತು ಮುಂದಿನ ಪ್ರದರ್ಶನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದು ಕಲಾವಿದನ ದೃಷ್ಠಿಯಲ್ಲಿ ಇದು ಲಾಭದಾಯಕವೆನಿಸುತ್ತದೆ. ಇಂದು ವೃತ್ತಿ ಮೇಳಕ್ಕಿಂತ ಹೆಚ್ಚಾಗಿ ಹವ್ಯಾಸಿ ಸಂಘ, ಸಂಸ್ಥೆಗಳು, ತಾಳಮದ್ದಲೆಗಳು ಈ ಮಾಧ್ಯಮವನ್ನು ಅವಲಂಬಿಸಿರುವುದನ್ನು ಕಾಣಬಹುದು. ಆಟಗಳ ಪ್ರದರ್ಶನಗಳಿಗಿಂತಲೂ ತಾಳಮದ್ದಲೆಗಳು ಡಿಜಿಟಲ್ ಮಾಧ್ಯಮಕ್ಕೆ ಹೆಚ್ಚು ಪೂರಕವಾಗಿದೆ. ವಾಚಿಕವೇ ಪ್ರದಾನವಾಗಿರುವ ಕಾರಣಕ್ಕೆ ಅಲ್ಲಿ ದೃಶ್ಯದ ಹಂಗಿರುವುದಿಲ್ಲ. ಈ ನಿಟ್ಟಿನಲ್ಲಿ ಪ್ರೇಕ್ಷಕ ಆಟಗಳಿಗಿಂತಲೂ ಹೆಚ್ಚಾಗಿ ತಾಳಮದ್ದಲೆಯನ್ನು ಪೂರ್ಣವಾಗಿ ಆಸ್ವಾದಿಸುವುದಕ್ಕೆ ಸಾಧ್ಯವಿದೆ. ಈ ಹಿಂದೆ ಕ್ಯಾಸೆಟ್ ಯುಗದಲ್ಲಿ ಇಂತಹ ಕ್ರಾಂತಿಯುಂಟಾಗಿ ಸಾವಿರಾರು ಕ್ಯಾಸೆಟ್ ಗಳು ಯಕ್ಷಗಾನದಲ್ಲಿ ಬಂದಿರುವುದನ್ನು ಇಲ್ಲಿ

ನೆನಪಿಸಿಕೊಳ್ಳಬಹುದು. ಇಂದು ಈ ಮಾಧ್ಯಮಕ್ಕೆ ಇಂದು ನೆಟ್ವರ್ಕ್ ಸಮಸ್ಯೆ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಕಾರ್ಯಕ್ರಮಗಳು ಹೆಚ್ಚಾಗಿ ಹಳ್ಳಿಗಳಲ್ಲಿ ನಡೆಯುವುದರಿಂದ ಅಲ್ಲಿ ನೆಟ್ವರ್ಕ್ ಸಮಸ್ಯೆಗಳು ತಲೆದೋರುತ್ತಿರುವುದರಿಂದ ಎಲ್ಲಾ ಕಾರ್ಯಕ್ರಮಗಳನ್ನು ಇಲ್ಲಿ ಅಳವಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಜೊತೆಗೆ ಪ್ರೇಕ್ಷಕನಿಗೂ ಕೂಡ high speed ನೆಟ್ವರ್ಕ್ ಇದ್ದರೆ ಮಾತ್ರ ಪ್ರದರ್ಶನದ ಪೂರ್ಣ ಸವಿಯನ್ನು ಸವಿಯುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಈ ಸಮಸ್ಯೆಗಳಿಗೆ ಮುಂದೆ ಪರಿಹಾರಗಳು ಸಿಗಬಹುದೆಂದು ಭಾವಿಸಬಹುದು. ಇಂದು ಡಿಜಿಟಲ್ ಮಾಧ್ಯಮ ಜಗತ್ತನ್ನು, ಎಲ್ಲರನ್ನು ಹತ್ತಿರವಾಗಿಸಿರುವುದು ಹೌದು. ಸಾಂಪ್ರದಾಯಿಕ ಕಲೆಯಲ್ಲಿ ಈ ಬಗೆಯಲ್ಲಿ ಪ್ರಯತ್ನಗಳಾಗುತ್ತಿರುವುದು ಗಮನಾರ್ಹವಾದ ಬೆಳವಣಿಗೆ. ಈ ನಿಟ್ಟಿನಲ್ಲಿ ಯಕ್ಷಗಾನವು ಬಹುತ್ವ, ಅದರ ಚಲನಶೀಲ ಗುಣವನ್ನು, ಸಂವೇದನೆಯನ್ನು ಮತ್ತೊಮ್ಮೆ ಎತ್ತಿಹಿಡಿಯುತ್ತಿದೆ.

## ಡಿಜಿಟಲ್ ಮಾಧ್ಯಮ ಯಕ್ಷಗಾನಕ್ಕೆ ಪೂರಕವೇ? ಮಾರಕವೇ?

**ಮಾರಕಗಳು**

ಈ ಡಿಜಿಟಲ್ ಮಾಧ್ಯಮವನ್ನು ಯಕ್ಷಗಾನದ ಪ್ರಚಾರಕ್ಕಾಗಿ ಬಳಸುವ ಮೂಲಕ ರಂಗಸ್ಥಳದ ಎದುರು ಬಂದು ಕುಳಿತು ನೇರವಾಗಿ ಯಕ್ಷಗಾನ ಕಲೆಯನ್ನು ಅನುಭವಿಸುವ (ಲೈವ್) ಪ್ರೇಕ್ಷಕರು ವೃದ್ಧಿಸಿದರೆ? ತನ್ಮೂಲಕ ವ್ಯಾಪಾರಿ ಮೇಳಗಳ ಸಂಪಾದನೆ ವೃದ್ಧಿಸಿದೆ ಅಂತ ಧೈರ್ಯವಾಗಿ ಹೇಳಬಹುದೇ? ಇಲ್ಲ ಅನಿಸುತ್ತದೆ.ಯಾಕಂದರೆ ಈಗಿನ ಯಕ್ಷಗಾನ ಪ್ರದರ್ಶನದಲ್ಲಿ ಪ್ರೇಕ್ಷಕರ ಸಂಖ್ಯೆಯನ್ನು ನೋಡುವುದಾದರೆ ಯಕ್ಷಗಾನ ಕ್ಷೇತ್ರವು ಯಾಕೆ ಪ್ರೇಕ್ಷಕರ ಕೊರತೆಯನ್ನು ಕಾಣುತ್ತಿದೆ. ಪ್ರಿಂಟ್ ಮೀಡಿಯಾವನ್ನು ಪ್ರಚಾರಕ್ಕಾಗಿ ನೆಚ್ಚಿಕೊಂಡ ಕಾಲವಾದ 1980 –1990 ರ ದಿನಗಳಲ್ಲಿ 600 ಜನರಿಗೆ ಸೀಮಿತವಾಗಿ ಸುಖಾಸೀನ ಹಾಗೂ ಥಿಯೇಟರ್ ವ್ಯವಸ್ಥೆ ಇದ್ದ ಟೆಂಟ್ ಮೇಳಗಳು, ಪ್ರೇಕ್ಷಕರ ಸಂಖ್ಯೆಯಲ್ಲಿ ಹೆಚ್ಚಳ ಕಂಡು ತಮ್ಮ ಟೆಂಟ್ ಗಳನ್ನು 1200 ಜನರ ವೀಕ್ಷಣೆಗೆ ಅನುಕೂಲವಾಗುವಂತೆ ಹಿಗ್ಗಿಸಿಕೊಂಡವು.ಬಯಲಾಟ ಮೇಳಗಳಿಗೂ ಪ್ರೇಕ್ಷಕರ ಕೊರತೆ ಇರಲಿಲ್ಲ. ಹರಕೆ ಆಟಗಳಂತೂ ಜಾತ್ರೆಯ ರೂಪದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು .ಹಾಗಾದರೆ ಸುಧಾರಿತ ಡಿಜಿಟಲ್ ಮಾಧ್ಯಮದ ಪ್ರಚಾರದಿಂದ ವರ್ಧಿಸಬೇಕಾದ ಪ್ರೇಕ್ಷಕವರ್ಗ ಕೊರತೆಯನ್ನು ಯಾಕೆ ಕಂಡಿತು? ಪ್ರಚಾರ ಮಾಧ್ಯಮವಾಗಿ ಹೊರಹೊಮ್ಮಿದ ಈ ರೀತಿಯ ಡಿಜಿಟಲ್ ಮಾಧ್ಯಮದ ಮೂಲಕ ಆದ ಪ್ರಚಾರವುಗಳು ಹೊಸ ಪ್ರೇಕ್ಷಕರನ್ನು ಟೆಂಟ್ ಒಳಗೆ ಅಥವಾ ಹರಕೆ ಬಯಲಾಟಗಳ ಪ್ರದರ್ಶನಕ್ಕೆ ಸೆಳೆಯಿತೇ? ಇದೊಂದು ಯಕ್ಷ ಪ್ರಶ್ನೆ? ಇದಕ್ಕೆ ಉತ್ತರ ಹುಡುಕಲು ಹೋದಾಗ ಸಿಗುವ ವಾಸ್ತವಿಕಾಂಶವೇ ಬೇರೆ. ಈ ರೀತಿಯ ಆಧುನಿಕ ಪ್ರಚಾರ ವ್ಯವಸ್ಥೆಯಿಂದ ಟೆಂಟ್ ಮೇಳಗಳ ಟೆಂಟುಗಳು ಹೌಸ್ ಫುಲ್ ಆಗಿ ಟೆಂಟ್ ಕೀಳಬೇಕಾದ ಪರಿಸ್ಥಿತಿ ಬಂದಿರಬೇಕಿತ್ತಲ್ಲವೇ? ಅದು ಹಾಗಾಗದೆ, ಒಂದು ಕಾಲದಲ್ಲಿ (80 ರ ದಶಕ) 1200 ಪ್ರೇಕ್ಷಕರು ತುಂಬಾ ಬೇಕಾದ ಗಾತ್ರದಲ್ಲಿರಬೇಕಾದ ಟೆಂಟ್ ಗಳು, ಪ್ರಸ್ತುತ ಕಾಲಘಟ್ಟದಲ್ಲಿ 500 ಸಂಖ್ಯೆಯ ಪ್ರೇಕ್ಷಕರು ಕೂರುವಷ್ಟು ಕಿರಿದಾಗಿ ಅದು ಕೂಡಾ ಫುಲ್ ಆಗದೆ ಬರಗೆಡಲು ಕಾರಣ ಏನು? ಯಾಕೆ ಹೀಗಾಯ್ತು? ಅಂಕಿ–ಅಂಶಗಳ ಪ್ರಕಾರ 20ಕ್ಕೂ ಮಿಕ್ಕಿ ಇದ್ದ ವಾಣಿಜ್ಯ ಟೆಂಟ್ ಮೇಳಗಳ ಸಂಖ್ಯೆ ಕೇವಲ ಎರಡಕ್ಕೆ ಇಳಿದಿದೆ ಇದಕ್ಕೆ ಕಾರಣ ಪ್ರೇಕ್ಷಕರ ಕೊರತೆ ತನ್ಮೂಲಕ ಹಾಕಿದ ಬಂಡವಾಳದ ನಷ್ಟ. ಡಿಜಿಟಲ್ ಮಾಧ್ಯಮದ ಪ್ರಚಾರದ ನೆರವಿನಿಂದ ಕಲಾವಿದರ ಪರಿಚಯ ಹಾಗೂ ಅಭಿವ್ಯಕ್ತಿ ಕ್ಷಣ ಮಾತ್ರದಲ್ಲಿ ಜಗತ್ತಿನೆಲ್ಲೆಡೆ ಪಸರಿಸಿ ಜನರಿಗೆ ಮುಟ್ಟಿದೆ. ಇದು ಇಷ್ಟಕ್ಕೆ ಸೀಮಿತವಾಗಿದ್ದಲ್ಲಿ ಅಡ್ಡಿಲ್ಲವಾಗಿತ್ತೇನೋ ಆದರೇ ಈ ರೀತಿಯ ಹಂಚುವಿಕೆಯ ಹಿಂದೆ ಇನ್ನೊಂದು ಸುಪ್ತವಾದ ಉದ್ದೇಶವೂ ಕಾಣುತ್ತದೆ. ಕೇವಲ ತಾವು ಮೊದಲು ಹಂಚಿದ್ದೇವೇ ಎಂದು ದಾಖಲಿಸುವ ಹೆಗ್ಗಳಿಕೆಯ ಮನೋಧರ್ಮ? ಅಥವಾ ತಾನು ಅಭಿಮಾನ ಇಟ್ಟ ಕಲಾವಿದನ ಅನಾವರಣ .... ಅಥವಾ ಇದರಿಂದ ಯಕ್ಷಗಾನ ಕಲೆಗೆ ಏನಾದರೂ ಅನುಕೂಲ ಆಗಲಿ ಅನ್ನುವ ಉದ್ದೇಶವೇ? ಇದು ಹೌದೇ ಆಗಿದ್ದಲ್ಲಿ ಮೊದಲ ಎರಡು ಉದ್ದೇಶದ ಹೊರತಾಗಿ ಈ ರೀತಿಯ ಆಧುನಿಕ ಪ್ರಚಾರ ವ್ಯವಸ್ಥೆಯಿಂದ ಓರ್ವ ಪ್ರಚಾರ ಗಿಟ್ಟಿಸಿದ ಕಲಾವಿದನ ಅಭಿಮಾನಿಗಳಾದ ಯಕ್ಷಗಾನದ ಪ್ರತ್ಯಕ್ಷ ಪ್ರೇಕ್ಷಕರನ್ನು ಎಷ್ಟು ಸಂಖ್ಯೆಯಲ್ಲಿ ತನ್ನತ್ತ ಸೆಳೆಯಿತು? ಅದರಿಂದಾಗಿ ಯಕ್ಷಗಾನ ಕ್ಷೇತ್ರ ರಂಗದ ಎದುರು ಹೊಂದಿದ ಪ್ರೇಕ್ಷಕರ ಸಮೃದ್ಧಿ ಏನು? ಈ ಹಿಂದೆ ಸ್ಟಾರ್ ಕಲಾವಿದನ ಹಿಂದೆ ಆತನ ಅಭಿಮಾನಿ ಆತನ ಅಭಿವ್ಯಕ್ತಿಯನ್ನು ಅನುಭವಿಸಲು ಮೇಳದತ್ತ ಧಾವಿಸುತ್ತಿದ್ದರು ಈಗ ಅದು ಕೇವಲ ಸೆಲ್ಫಿಗಾಗಿ ಮಾತ್ರ?

**ಹರಕೆ ಮೇಳಗಳ ಪ್ರೇಕ್ಷಕ ಪರಿಸ್ಥಿತಿ**

ಈ ರೀತಿಯ ಪ್ರಚಾರದಿಂದಾದ ಪ್ರೇಕ್ಷಕ ವರ್ಗದ ಸಂಖ್ಯೆಯನ್ನು ಗಮನಿಸಿದರೆ ಇಂದಿನ ಯಕ್ಷಗಾನ ಹರಕೆ ಬಯಲಾಟ ಮೇಳಗಳ ಪ್ರದರ್ಶನದಲ್ಲಿ ಕೇವಲ ಬೆರಳೆಣಿಕೆಯಷ್ಟು ಆಗಲು ಕಾರಣವೇನು? ಅದು ಕೂಡ ಚಹಾ, ಕಾಫಿ, ತಿಂಡಿ, ತೀರ್ಥದ ರೂಪದಲ್ಲಿ ಆಗುವ ಒಂದಷ್ಟು ಸತ್ಕಾರ ಉಪಚಾರದ ನಡುವೆ ಮಧ್ಯರಾತ್ರಿಯ ತನಕ ಮಾತ್ರ. ಅನಂತರ ರಂಗದ ಎದುರುಗಡೆ ಇರುವುದು ಕೇವಲ ಆ ದಿನದ ಸೇವಾಕರ್ತರು ಹಾಗೂ ಮೇಳದ ಕಲಾವಿದರಿಗಷ್ಟೇ ಸೀಮಿತ.

**ಪ್ರೇಕ್ಷಕರಿಗೆ ಸಮಯವಕಾಶದ ಕೊರತೆಯೇ? ಅಥವಾ ಯಕ್ಷಗಾನ ಪ್ರದರ್ಶನದ ಗುಣಮಟ್ಟದ ಕೊರತೆಯೇ?**

ಇಲ್ಲಿ ನಾವು ಒಂದಿಷ್ಟು ಬುದ್ದಿಗೆ ಕೆಲಸ ಕೊಡಬೇಕಾದ ಅವಶ್ಯಕತೆ ಇದೆ. .ಅದೇನೆಂದರೆ ದೇವರ ಸಮ್ಮುಖದಲ್ಲಿ ಆರಾಧನಾ ರೂಪದಲ್ಲಿದ್ದ ಪ್ರದರ್ಶನಗೊಳ್ಳುತ್ತಿದ್ದ ಯಕ್ಷಗಾನ ಕಲೆಯು ಪ್ರೇಕ್ಷಕರ ಆಶಯದಂತೆ ಜನರ ಸಮ್ಮುಖಕ್ಕೆ ಬಯಲಲ್ಲಿ ಬಂದಿತು. ಮುಂದುವರಿದು ಅದೇ ಕಲೆಯನ್ನು ಈ ಇಲೆಕ್ಟ್ರಾನಿಕ್ ದೃಶ್ಯ ಮಾಧ್ಯಮಗಳು (ಮೊಬೈಲ್ ವಿಡಿಯೋ ಚಿತ್ರೀಕರಣವೂ ಸೇರಿ) ಇನ್ನಷ್ಟು ಶ್ರಮವಹಿಸಿ ಪ್ರೇಕ್ಷಕರ ಅಂಗೈಯಲ್ಲಿಟ್ಟು ನೋಡುವಂತಹ ಸುಲಭದ ವ್ಯವಸ್ಥೆಯನ್ನು ಕಲ್ಪಿಸಿದವು. ಆದರೇ ಈ ಅನುಕೂಲದಿಂದ ಬಯಲಲ್ಲಿ ಕೂತು ಆಟ ನೋಡುವ ಪ್ರೇಕ್ಷಕರು, ಅದೇ ಯಕ್ಷಗಾನವನ್ನು ಬಯಲಲ್ಲಿ ಬಿಟ್ಟು ತಾವು ಮನೆಯೊಳಗೆ ಭದ್ರವಾಗಿ ಬಾಗಿಲು ಹಾಕಿ ಕುಳಿತು ನೋಡಲು ಆರಂಭಿಸಿದ ಪರಿಣಾಮವೇ ಇದು? ಯೋಚಿಸಬೇಕಾದ ವಿಷಯವಿದು. ಈ ರೀತಿಯ ಡಿಜಿಟಲ್ ಮಾಧ್ಯಮದ ಪ್ರಯೋಜನ ಹೊಂದಿದ ಯಕ್ಷಗಾನ ಕಲೆಯಿಂದ ಸಂತೆ, ಅಂಗಡಿ, ಸಂಚಾರಿ ಹೋಟೆಲ್, ಪ್ರಿಂಟ್ ಮೀಡಿಯಾ ಇತ್ಯಾದಿ ಎಲ್ಲವೂ ಹಿಂದಿನ ಗಳಿಕೆಯನ್ನು ಉಳಿಸಿಕೊಂಡಿಲ್ಲ ಯಾಕೆ? **ಹಾಗಾದರೆ ಡಿಜಿಟಲ್ ಮಾಧ್ಯಮದಿಂದ ಯಕ್ಷಗಾನ ರಂಗಕ್ಕಾದ ಲಾಭ ಏನು?**

**ಉಪಸಂಹಾರ**

ಈ ರೀತಿಯ ಮಾಧ್ಯಮದ ಬೆಳವಣಿಗೆ ಇನ್ನೊಂದು ರೀತಿಯ ಹೊಸ ಪಥವನ್ನು ಕಂಡುಕೊಂಡಿತು. ಯಕ್ಷಗಾನ ಕಲೆಯ ಅಭಿಮಾನಿಯಾಗಬೇಕಿದ್ದ ಪ್ರೇಕ್ಷಕ ಕಲಾವಿದರ ಅಭಿಮಾನಿಯಾದ ಹಾಗಾಗಿ ಕಲೆ ಗೌಣವಾಗಿ ಕಲಾವಿದನೇ ಪ್ರಾಮುಖ್ಯವಾದ ಕಲೆಯು ನಿಂತ ನಿರಾಗದೆ ವಿಕಸನ ಆಗಬೇಕು ಎಂಬ ಧೋರಣೆಯ ಸಾಕ್ಷಾತ್ಕಾರದಲ್ಲಿ ಜವಾಬ್ದಾರಿಯುಳ್ಳ ಕಲಾವಿದರು ಕೊಡಮಾಡಿದ ರಂಗಾಭಿವ್ಯಕ್ತಿಯಲ್ಲಿ ವಿಕಸನವಾಗಿ ಒಳ್ಳೆಯ ವಿಚಾರಗಳು ಮೂಡಿ ಬಂದಷ್ಟು ವೇಗದಲ್ಲಿ ಒಂದಷ್ಟು ಅಗ್ಗದ ಪ್ರಚಾರಾಪೇಕ್ಷಿತ ಮನಸಿಗ ಕಲಾವಿದರು ನೀಡಿದ ಅನ್ಯರಂಗದ ಅಪಸವ್ಯಗಳು ಕೂಡಾ ವಿಜೃಂಭಿಸಿತೇ? ಇಂತಹ ವ್ಯವಸ್ಥೆಯಡಿಯಲ್ಲಿ ಮನೆಯೊಳಗೆ ಕುಳಿತು ಯಕ್ಷಗಾನ ನೋಡುವ ಪ್ರೇಕ್ಷಕ ತಾನು ಕಂಡದ್ದು ಮಾತ್ರ ಯಕ್ಷಗಾನ ಅನ್ನುವ ಭ್ರಮೆಯಲ್ಲಿ ಒಂದಷ್ಟು ಪ್ರಶಂಸೆ ಮೆಚ್ಚುಗೆಯ ಅಭಿಮಾನದ ಹೊಳೆಯನ್ನು ಈ ರೀತಿಯ ಮಾಧ್ಯಮದ ಮೂಲಕ ಹರಿಸುತ್ತಾನೆ. ಹಾಗಾಗಿ ರಂಗ ಪ್ರವೇಶ ಮಾಡಿದ ಅತ್ಯಲ್ಪ ಕಾಲದಲ್ಲಿ ಕಲಾವಿದರಿಗೆ ಸವ್ಯಸಾಚಿ, ದಶಾವತಾರಿ, ಪಟ್ಟವನ್ನು ನೀಡುತ್ತಾರೆ. ಪ್ರಚಾರಕ್ಕಾಗಿ ಡಿಜಿಟಲ್ ಮಾಧ್ಯಮವನ್ನು ಬಯಸುವ ಕಲಾವಿದರು ಡಿಜಿಟಲ್ ಮಾಧ್ಯಮದಲ್ಲಿ ಬಂದ ವಸ್ತುನಿಷ್ಠ ವಿಮರ್ಶೆಗೆ ಸಕಾರಾತ್ಮವಾಗಿ ಸ್ಪಂದಿಸಿ ಸ್ವೀಕರಿಸಿ ಬೆಳೆಯಬಲ್ಲ ಗುಣ ಹೊಂದಬಲ್ಲರೇ? ಹಾಗಾದಲ್ಲಿ ಯಕ್ಷಗಾನಕ್ಕೆ ಡಿಜಿಟಲ್ ಮಾಧ್ಯಮ ದೊಡ್ಡ ಕೊಡುಗೆಯಾಗಬಹುದು. ಯಾವುದೇ ಒಂದು ಅಭಿವ್ಯಕ್ತಿ, ಚಿಂತನೆ, ಅಧ್ಯಯನ, ಅಧ್ಯಾಪನ, ವಿಮರ್ಶೆ, ಒಂದು ಮಾಧ್ಯಮ ಇಲ್ಲದೆ ಬೆಳೆಯಬಲ್ಲುದೇ? ಬೆಳೆದರೆ ಅದು ಪರಿಪೂರ್ಣವಾಗಬಲ್ಲದೇ? ವಿಷಯಾಧಾರಿತವಾದ, ಬೌದ್ಧಿಕವಾದ, ಜಿಜ್ಞಾಸೆಗೆ ಅಭಿವ್ಯಕ್ತಿಗೆ ಡಿಜಿಟಲ್ ಮಾಧ್ಯಮ ಎಂಬ ಒಂದು ಉತ್ತಮ ದೃತ್ಯ ಮಾಧ್ಯಮವನ್ನು ಸಕಾರಾತ್ಮವಾಗಿ ಬಳಸಿಕೊಳ್ಳುವುದು ಅತೀ ಅಗತ್ಯವಾಗಿದೆ

**ಲೇಖಕರು: ಸುರೇಂದ್ರ ಫಣಿಯೂರ್**

***ಓದುಗರ ಅನಿಸಿಕೆ*** – ನಾದ ನೂಪುರ ಡಿಜಿಟಲ್ ಪತ್ರಿಕೆ ಯಲ್ಲಿ ಕಾಲಮಿತಿಯ ಬಗ್ಗೆ ಪ್ರಕಟವಾದ ಲೇಖನ ಅತ್ಯಂತ ಸೂಕ್ತವಾಗಿದೆ. ಬದಲಾದ ಜೀವನ ಶೈಲಿಯೊಂದಿಗೆ ಎಲ್ಲವನ್ನೂ ತಳಕು ಹಾಕುವುದು ಸಮರ್ಥನೀಯವಲ್ಲ. ಯಕ್ಷಗಾನ ಆರಾಧನಾ ಕಲೆಯಾಗಿ ಬೆಳೆದು ಉಳಿದು ಬಂದಿದೆ. ಅದರಲ್ಲಿ ದೃಶ್ಯ ಮಾಧ್ಯಮದ ಔಚಿತ್ಯಕ್ಕೆ ಸಂಬಂಧಿಸಿ ವಿಪುಲ ತಾಂತ್ರಿಕ ಅಂಶಗಳು ಒಳಗೊಂಡಿವೆ. ಈ ತಾಂತ್ರಿಕ ಅಂಶಗಳು ಕಾಲಬಾಧಿತವಾದವುಗಳು ಎಂಬ ಅಂಶದ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದೀರಿ. ಇವರ ನಿರ್ವಹಣೆ ಚೆನ್ನಾಗಿದ್ದರೆ ಬೆಳಗಾಗುವ ತನಕವೂ ಒಂದಷ್ಟು ಮಂದಿ ಪ್ರೇಕ್ಷಕರು ಇರುತ್ತಾರೆ. ಜೀರೋ ಪ್ರೇಕ್ಷಕರಿರುವ ಕ್ರೀಡಾಂಗಣದಲ್ಲಿ ಆಟಗಾರ ಏಕಾಗ್ರತೆ ಕಳಕೊಂಡರೆ ವಿಕೇಟ್ ಉರುಳುತ್ತದೆ. ಅಲ್ಲಿ ಓರ್ವ ರೆಫರಿ ಇದ್ದಾನೆ. ಆತ ಔಟ್ ಎಂದು ಕೈ ಬೆರಳು ಎತ್ತುತ್ತಾನೆ. ಯಕ್ಷಗಾನದಲ್ಲಿ ಅಂಥ ವ್ಯಕ್ತಿ ಇಲ್ಲದಿರಬಹುದು. ಆದರೆ ಕಲಾವಿದರಿಗೆ ಸ್ವಯಂ ತೀರ್ಪುಗಾರಾಗಿರಬೇಕಾದ ಬದ್ಧತೆ ಇರಬೇಕಲ್ಲವೇ. ಮುಖ್ಯವಾಗಿ ಈ ಸತ್ಯವನ್ನು ಜನ ಅರ್ಥ ಮಾಡಿಕೊಳ್ಳಬೇಕಲ್ಲವೇ! – ***ರಾಘವ ಶೆಟ್ಟಿ ಹಿರಿಯ ವಿಮರ್ಶಕರು***

## ಧೀರಕಲೆಯೊಳಗೆ ಕೀರವಾಣಿಯರು – 03



ಸಾಯಿಸುಮಾ ಎಂ. ನಾವಡ

### *ಶ್ರೀಮತಿ ಅಕ್ಕಾಣಿಯಮ್ಮ –ಮಹಿಳೆ ಯಕ್ಷಗಾನಕ್ಕೆ ಪ್ರವೇಶಿಸುವುದೇ ಕಷ್ಟವಿದ್ದ ಕಾಲದಲ್ಲಿ ಮಹಿಳಾಮೇಳ ಕಟ್ಟಿದ ಗಟ್ಟಿಗಿತ್ತಿ*

ಯಕ್ಷಗಾನವನ್ನು ನೋಡುವುದಕ್ಕೂ ಮನೆಯವರ ಅಪ್ಪಣೆ ಪಡೆದು ಹೋಗಬೇಕಿದ್ದ ಕಾಲವದು. ಮನೆಯ ಹಿರಿಯರ ಬೈಗುಳದೊಂದಿಗೆ ಯಕ್ಷಗಾನದ ಹುಚ್ಚನ್ನು ಹಿಡಿಸಿಕೊಳ್ಳುವುದು ಸುಲಭದ ಮಾತಲ್ಲ. ಮನೆಯವರನ್ನು ಹೇಗೋ ಒಪ್ಪಿಸಿ, ರಾತ್ರಿಯಿಡೀ ಯಕ್ಷಗಾನವನ್ನು ವೀಕ್ಷಿಸುತ್ತಿದ್ದ ಅನೇಕ ಮಹಿಳೆಯರು ತಮ್ಮ ಆಸಕ್ತಿಯನ್ನೇ ಮರೆತು ಬದುಕು ಮುಗಿಸಿದವರಿದ್ದಾರೆ. ಅಂತಹ ಮಹಿಳೆಯರ ನಡುವೆ ಎಲ್ಲೋ ಒಬ್ಬರೋ ಇಬ್ಬರೋ ತಮ್ಮ ಆಸಕ್ತಿಯನ್ನು ಬೆಳೆಸಲು ಸಾಧ್ಯವಾಗಿಸಿಕೊಂಡವರು ಇಂದಿನ ಇತಿಹಾಸವಾಗಿದ್ದಾರೆ. ಅಂತಹ ಯಕ್ಷಗಾನಾಸಕ್ತ ಮಹಿಳೆಯರಲ್ಲಿ ಶ್ರೀಮತಿ ಅಕ್ಕಾಣಿಯಮ್ಮ ಅವರೂ ಒಬ್ಬರು. 1925 ರಲ್ಲಿ ಅಂದಿನ ದಕ್ಷಿಣಕನ್ನಡ ಜಿಲ್ಲೆಯ ಕೋಟದ ಕಾರ್ಕಡ ಗ್ರಾಮದ ಹಂದಟ್ಟು ಎಂಬಲ್ಲಿನ ಹಂದೆ ಮನೆತನದ ಕಾರ್ಕಡ ನಾಗಪ್ಪ ಉಪಾಧ್ಯ ಹಾಗೂ ವಾಗ್ದೇವಿ ದಂಪತಿಗಳಿಗೆ ಮಗಳಾಗಿ ಜನಿಸಿದವರು ಅಕ್ಕಾಣಿಯಮ್ಮ. ಯಕ್ಷಗಾನದ ಬಗೆಗೆ ಎಳವೆಯಿಂದಲೇ ಅತೀವ ಆಸಕ್ತಿಯನ್ನು ಬೆಳೆಸಿಕೊಂಡಿದ್ದವರು. ತಾಯಿಯನ್ನು ಬಹಳ ಬೇಗನೇ ಕಳಕೊಂಡರೂ



ದ್ರೌಪತಿ ಪ್ರತಾಪದ ಭೀಮನಾಗಿ ಅಕ್ಕಾಣಿಯಮ್ಮ

ಅಜ್ಜನ ಮಮತೆಯಲ್ಲಿ ಬೆಳೆದರು. ಇವರ ಅಜ್ಜ ಹಂದೆಯವರು ಯಕ್ಷಗಾನದ ಮಹಾ ಪೋಷಕರಾಗಿದ್ದವರು. ಅನೇಕ ಮೇಳಗಳ ಆಟಗಳನ್ನು ವರ್ಷಂಪ್ರತಿ ಆಡಿಸಿ ಪ್ರೋತ್ಸಾಹಿಸುತ್ತಿದ್ದವರು. ಹಾಗಾಗಿ ಅಕ್ಕಾಣಿಯಮ್ಮನವರ ಪರಿಸರವೇ ಇವರ ಕಲಾಸಕ್ತಿಗೆ ಪ್ರೇರಕವಾಯಿತೆನ್ನಬಹುದು. ಅಂದಿನ ಹಿರಿಯ, ಪ್ರಸಿದ್ಧ ಕಲಾವಿದರ ವೇಷಗಳನ್ನು ಕಣ್ತುಂಬಿಸಿಕೊಳ್ಳುತ್ತಾ ತಾನೂ ಗೆಜ್ಜೆ ಕಟ್ಟಿ ಕುಣಿಯಬೇಕೆಂಬ ಕನಸು ಕಂಡ ಅಕ್ಕಾಣಿಯಮ್ಮ, ಮುಂದೊಂದು ದಿನ ಅದನ್ನು ನನಸು ಮಾಡಬೇಕೆಂದು ಪಣವನ್ನೂ ತೊಟ್ಟ ಧೀಮಂತ ಮಹಿಳೆ. ಅಂದಿನ ಸಾಮಾಜಿಕ ಪದ್ಧತಿಗನುಗುಣವಾಗಿ ಬಾಲ್ಯದಲ್ಲೇ ನರಸಿಂಹ ಉರಾಳ ಎಂಬವರನ್ನು ವಿವಾಹವಾದರೂ, ಹೆಚ್ಚು ಸಮಯ ಸುಖದಿಂದ ಬದುಕಲಾಗಲಿಲ್ಲ. ಕಾರಣ ಮದುವೆಯಾಗಿ ಎರಡು ವರ್ಷದಲ್ಲೇ ಬದುಕಿಗೆ ಬಂದೊದಗಿದ ವೈಧವ್ಯ. ಇದರಿಂದಾಗಿ ಸಾಮಾಜಿಕ ಕಟ್ಟುಪಾಡುಗಳಿಂದ ಮರಳಿ ತವರನ್ನೇ ಸೇರಬೇಕಾಯಿತು. ಅಂದಿನ ಸಮಾಜದ ಸ್ಥಿತಿಯೇ ಹಾಗಿತ್ತು. ಹೆಣ್ಣೋರ್ವಳು ಕಲಿಯುವಂತಿಲ್ಲ, ಓದುವಂತಿಲ್ಲ, ಬರೆಯುವಂತಿಲ್ಲ, ಯಾವುದೇ ಆಸಕ್ತಿಗಳನ್ನು ಬೆಳೆಸಿಕೊಳ್ಳುವಂತಿಲ್ಲ. ಆದರೆ ರಕ್ತಗತವಾಗಿ ಬಂದ ಕಲೆಯೊಲವು ಎಲ್ಲಾ ಬಂಧಗಳನ್ನು ಮೀರಿ ಬೆಳೆಯುತ್ತದೆ ಎಂಬುದಕ್ಕೆ ಇವರು ಉದಾಹರಣೆಯಾದರು. ಕಲೆಯ ಒಲವು ಎಲ್ಲಾ ಬಂಧಗಳನ್ನು ಬೇರ್ಪಡಿಸಿ ಇವರು ತಂಗಿಯ ಮನೆಗೆ ಬೆಂಗಳೂರಿಗೆ ಬರುವಂತೆ ಮಾಡಿತು. ಊರವರ, ಮನೆಯವರ ಕಟ್ಟುನಿಟ್ಟಿನ ನಿಯಮಗಳನ್ನು ಮುರಿದ ಇವರನ್ನು ಮನೆಯ ಬೇರೆ ಯಾರೂ ಆದರಿಸಲಿಲ್ಲ. ಅದಕ್ಕೆ ಇವರು ಎದೆಗುಂದಲೂ ಇಲ್ಲ. ಬದಲಾಗಿ ಮಾನಸಿಕ ದೃಢತೆಯಿಂದ ಬೆಳೆದರು. ಅವರನುಭವಿಸಿದ ಕಷ್ಟ ಕಾರ್ಪಣ್ಯಗಳೇ ಅವರನ್ನು ಅಷ್ಟು ಗಟ್ಟಿಗೊಳಿಸಿದ್ದವು. ಅಣ್ಣ ಗಣಪಯ್ಯ ಉಪಾಧ್ಯರಂತೆ ಯಕ್ಷಗಾನದತ್ತ ಮನವನ್ನು ಹರಿಸಿದರು. ಯಕ್ಷಗಾನದ ಮೇಳ ಕಟ್ಟಬೇಕೆಂಬ ಕನಸನ್ನು ಹೊತ್ತರು. ಆದರೆ ಅದು ಸಾಕಾರವಾಗುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅಂದಿನ ಕಾಲದಲ್ಲಿ



**ಅಕ್ಕಾಣಿಯಮ್ಮ**

ಮಹಿಳೆಯೋರ್ವಳು ಮೇಳ ಕಟ್ಟುತ್ತಾಳೆ ಎಂದರೆ ಪ್ರೋತ್ಸಾಹಿಸುವುದಕ್ಕೆ ಒಬ್ಬ ವ್ಯಕ್ತಿಯೂ ಇರಲಿಲ್ಲ. ಎಲ್ಲರದೂ ಆಸೆಗೆ ತಣ್ಣೀರೆರಚುವಂತಹ ಮಾತುಗಳೇ. ಆದರೂ ಬಹಳ ವರುಷಗಳ ಶ್ರಮದಿಂದ ಕೆಲವು ಕಲಾಪ್ರೋತ್ಸಾಹಕರ ಕಾರಣದಿಂದ ಮಹಿಳಾ ಮೇಳ ಕಟ್ಟುವ ಕನಸು 1979–80 ರಲ್ಲಿ ಕೈಗೂಡಿತು. ಬೆಂಗಳೂರಿನಲ್ಲಿ "ಮಹಿಳಾ ಯಕ್ಷಗಾನ ಕಲಾಮಿತ್ರ ಮಂಡಳಿ" ಎಂಬ ಹೆಸರಿನಿಂದ ಅಕ್ಕಾಣಿಯಮ್ಮನವರ ಮುಂದಾಳತ್ವದಲ್ಲಿ ಮಹಿಳಾ ಯಕ್ಷಗಾನ ಮೇಳವೊಂದು ಸ್ಥಾಪಿಸಲ್ಪಟ್ಟಿತು. ಈ ಮಹಿಳಾಮೇಳಕ್ಕೆ ಗುಂಡ್ಮಿ ಸದಾನಂದ ಐತಾಳರ ನಿರ್ದೇಶನ ಮತ್ತು ಅದ್ಭುತ ಭಾಗವತಿಯಿತ್ತು. ಅದ್ಭುತ ಹಿಮ್ಮೇಳದ ಸಹಕಾರದಿಂದ ಮೊದಲ ಬಾರಿಗೆ ಮಹಿಳೆಯರನ್ನೇ ಸೇರಿಸಿಕೊಂಡು "ರಾಣಿ ಶಶಿಪ್ರಭೆ" ಎಂಬ ಪ್ರಸಂಗವನ್ನು ಬೆಂಗಳೂರು ನಗರದ ಪುರಭವನದಲ್ಲಿ ಪ್ರದರ್ಶಿಸಿ ಜನಮೆಚ್ಚುಗೆ ಪಡೆದರು. ಶ್ರೀಕೃಷ್ಣ ವಿವಾಹ, ಮೀನಾಕ್ಷಿ ಕಲ್ಯಾಣ, ಲವಕುಶ, ಪ್ರಮೀಳಾರ್ಜುನ, ಕರ್ಣಾರ್ಜುನ ಕಾಳಗ, ದ್ರೌಪದಿ ಪ್ರತಾಪ ಮೊದಲಾದ ಪ್ರಸಂಗಗಳನ್ನು ತಮ್ಮ ತಂಡದ ಮೂಲಕ ಪ್ರದರ್ಶಿಸಿದರು. ತಮ್ಮ ತಂಡದ ಕಲಾವಿದರು ಬಾರದೇ ಇದ್ದಾಗ ತಮ್ಮ ಇಳಿವಯಸ್ಸಿನಲ್ಲಿಯೂ ಅನಿವಾರ್ಯತೆಗಾಗಿ ವೇಷ ಧರಿಸುತ್ತಿದ್ದರು. ಮಿಸ್ ಇಂಡಿಯಾ ಖ್ಯಾತಿಯ ರೇಖಾ ಹಂದೆ, ಸಿನಿಮಾ ತಾರೆ ಕಾವೇರಿ, ಸುಜಾತ ಐತಾಳ್, ನೃಪಾಂಗಿ ಅಯ್ಯಂಗಾರ್ ಮುಂತಾದ ಅನೇಕರನ್ನು ಯಕ್ಷಗಾನ ಕ್ಷೇತ್ರಕ್ಕೆ ಪರಿಚಯಿಸಿದವರು. ಇವರ ಶಿಷ್ಯೆಯರಾದ ಸುಜಾತ ಐತಾಳ್ ಹಾಗೂ ನೃಪಾಂಗಿ ಅಯ್ಯಂಗಾರ್ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಮೇಳವಾದ ಶ್ರೀ ಅಮೃತೇಶ್ವರಿ ಮೇಳದವರೊಂದಿಗೆ ಅಭಿನಯಿಸಿ ಸೈ ಎನಿಸಿಕೊಂಡವರು. ಬೆಂಗಳೂರು, ತಮಿಳುನಾಡು, ಆಂಧ್ರಪ್ರದೇಶ , ಪಾಂಡಿಚೇರಿಯಲ್ಲೂ ಪ್ರದರ್ಶನವಿತ್ತು ಜನಮನ್ನಣೆ ಗಳಿಸಿದರು. ತೀರ್ಥಹಳ್ಳಿ, ಶಿವಮೊಗ್ಗ, ಸಾಗರ, ಉತ್ತರಕನ್ನಡ ಜಿಲ್ಲೆಯಲ್ಲಿ ಮತ್ತೆ ಮತ್ತೆ ಇವರನ್ನು ಕರೆಯಿಸಿ, ಪ್ರದರ್ಶನಕ್ಕೆ ಅವಕಾಶವಿತ್ತರು. ಅನೇಕರು ಇವರನ್ನು ಗುರುತಿಸಿ ಸನ್ಮಾನಿಸಿದರು. ಕರ್ನಾಟಕ ಸರಕಾರವು ಬೆಳಿಹಬ್ಬದಂದು ಇವರಿಗೆ ಮಾಸಿಕಧನವನ್ನಿತ್ತು ಗೌರವಿಸಿತು. ಯಕ್ಷಗಾನದಲ್ಲಿ ಹಿಮ್ಮೇಳ ಮತ್ತು ಮುಮ್ಮೇಳ ಎರಡರಲ್ಲೂ ಮಹಿಳೆಯರೇ ಪೂರ್ಣಮಟ್ಟದಲ್ಲಿ ಭಾಗವಹಿಸುವಂತೆ ಮಾಡುವುದು ಇವರ ಬಯಕೆಯಾಗಿತ್ತು. ಆ ಬಯಕೆಯನ್ನು ಇಂದಿನ ಮಹಿಳೆಯರು ಸಾಕಾರಗೊಳಿಸುವತ್ತ ಪ್ರಯತ್ನಿಸುತ್ತಲೇ ಇದ್ದಾರೆ. ಅಕ್ಕಾಣಿಯಮ್ಮ ಅವರ ಇಚ್ಛಾಶಕ್ತಿ, ಆಸಕ್ತಿ ಕಲೆ, ಕಲಾವಿದರಿಗೆ ಪ್ರೇರಣೆ ಎಂದರೆ ತಪ್ಪಾಗುವುದಿಲ್ಲ. ಅನೇಕ ಮಹಿಳಾ ಸಂಘಟಕರಿಗೆ ಪ್ರೇರಕರಾದ ಅಕ್ಕಾಣಿಯಮ್ಮನವರ ದಿಟ್ಟತನಕ್ಕೆ ಶಿರಬಾಗೋಣ.

## ಚಾರಿಟಿ ರೂಮ್

ಛಂದೋಬ್ರಹ್ಮ ಬಿರುದಾಂಕಿತ ***ಯಕ್ಷಕವಿ ಶ್ರೀಯುತ ಗಣೇಶ್ ಕೊಲೆಕಾಡಿ***ಯವರು ಅಪ್ಪಟ ದುರಂತ ಕಥೆ. ಮೇರು ಹಿಮಾಲಯದಷ್ಟು ಜ್ಞಾನ, ಕವಿತ್ವ ಯಕ್ಷಗಾನದಲ್ಲಿ ಗುರುತ್ವ ಹಾಗೂ ಅಪಾರ ಶಿಷ್ಯವರ್ಗ ಇವರ ಜೀವಮಾನದ ಸಂಪಾದನೆ. ದೀರ್ಘ ಕಾಲದ ಗಂಭೀರ ಅನಾರೋಗ್ಯ ಪರಿಸ್ಥಿತಿಯಿಂದಾಗಿ ಜೀವನ ನಿರ್ವಹಣೆ ತುಂಬ ಕಷ್ಟವಾಗಿದೆ. ಇವರು ಕಳೆದ ವಾರವಷ್ಟೇ ಮತ್ತೆ ಬಾಯಿಯ ಆಪರೇಷನ್ ಗೆ ಒಳಗಾಗಿದ್ದು ಮತ್ತೆ ಆಸ್ಪತ್ರೆಯ ದೊಡ್ಡ ಮೊತ್ತ ಇವರಿಗೆ ಹೊರಲಾಗದ ಹೊರೆಯಾಗಿದೆ. ವೈದ್ಯಕೀಯ ಖರ್ಚು ವೆಚ್ಚಗಳಿಂದ ಕಂಗಾಲಾಗಿರುವ ಯಕ್ಷಗುರುವಿಗೆ ಶಿಷ್ಯವರ್ಗ ಹಾಗೂ ಯಕ್ಷಾಭಿಮಾನಿಗಳ ಸಹಾಯ ಹಸ್ತ ಬೇಕಿದೆ. ಸಹೃದಯರು ಇವರ ಕಷ್ಟಕ್ಕೆ ಸ್ಪಂದಿಸಿ ಇವರು ಚೇತರಿಸಿಕೊಳ್ಳಲು ಸಹಾಯ ಮಾಡುವ ಸಂಕಲ್ಪ ಮಾಡಬೇಕಿದೆ. ಗಣೇಶ್ ಕೊಲೆಕಾಡಿಯವರಿಗೆ ನೆರವು ನೀಡಲು ಬಯಸುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ನಿಮ್ಮ ಸಹಾಯಧನವನ್ನು ಕಳುಹಿಸಿಕೊಡಬಹುದು. State bank of India, Karnad Mulki branch, A/c No: 20303905203, IFSC: SBINooo7904. Google pay - 9482130381

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ



ದಿನೇಶ್ ಅಮ್ಮಣ್ಣಾಯ

***ಕಲಾವಿದರು – ದಿನೇಶ್ ಅಮ್ಮಣ್ಣಾಯ, ಬಾಗವತರು***

ತಂದೆ – ನಾರಾಯಣ ಅಮ್ಮಣ್ಣಾಯ, ತಾಯಿ – ಕಾವೇರಿಯಮ್ಮ, ಜನನ– 1959 ಜುಲೈ
ಧರ್ಮಪತ್ನಿ – ಸುಧಾ, ಮಕ್ಕಳು – ಅಕ್ಷತಾ, ಅಮಿತಾ,
ಗುರುಗಳು – ದಾಮೋದರ ಮಂಡೆಚ್ಚ, ಸಂಗೀತ ಕಲಿತದ್ದು – ದೊಡ್ಡಪ್ಪನ ಮಗಳು ರಾಜೀವಿಯವರಲ್ಲಿ
ಮೊದಲು ಸೇವೆ ಸಲ್ಲಿಸಿದ ಮೇಳ – 1980 ರಲ್ಲಿ ಶ್ರೀಧರ ಭಂಡಾರಿಯವರ ಪುತ್ತೂರು ಮಹಾಲಿಂಗೇಶ್ವರ ಮೇಳದಲ್ಲಿ

ಭಾಗವತಿಕೆ ಮತ್ತು ಸಂಗೀತದ ವ್ಯತ್ಯಾಸ ಹಾಗೂ ಸಾಮ್ಯತೆಯನ್ನು ಹಿರಿಯ ಭಾಗವತ ದಿನೇಶ್ ಅಮ್ಮಣ್ಣಾಯರು ವಿವರಿಸುವುದು ಹೀಗೆ ಭಾಗವತಿಕೆ ಎಂಬುದು ಒಂದು ಮಟ್ಟು. ಸಂಗೀತ ಎಂಬುದು ಪ್ರತಿಯೊಂದು ಪ್ರಕಾರಗಳಲ್ಲಿಯೂ ಇರುವಂಥದ್ದು. ಅದು ಯಕ್ಷಸಂಗೀತ, ಸಿನಿಮಾ ಸಂಗೀತ, ಭಾವಗೀತಗಳ ಸಂಗೀತ ಇವು ಎಲ್ಲವೂ ಸಂಗೀತವೇ. ಎಲ್ಲದಕ್ಕೂ ಸ್ವರ ಸ್ಥಾನವಿದೆ. ಯಕ್ಷಗಾನದ ಹಾಡುಗಾರಿಕೆ ಒಂದು ಮಟ್ಟು ಎಂದರ್ಥ. ಯಕ್ಷಗಾನದಲ್ಲಿ ಎತ್ತುಗಡೆ ಹೆಚ್ಚಾಗಿದೆ. ಸಂಗೀತದಲ್ಲಿ ಹಾಡು ಕೆಳಸ್ಥಾಯಿಯಲ್ಲಿ ನಿಲ್ಲುತ್ತದೆ. ಆದರೆ ಯಕ್ಷಗಾನದಲ್ಲಿ ಹಾಡನ್ನು ತೆಗೆಯೋ ಕ್ರಮವೂ ಮೇಲಿಂದಲೇ. ನಿಲ್ಲಿಸುವುದೂ ಮೇಲಿಂದಲೇ. ಹಾಗೆಂದು ಯಕ್ಷಗಾನ ಮತ್ತು ಸಂಗೀತದ ರಾಗಗಳು ಬೇರೆ ಬೇರೆ ಅಲ್ಲ. ಯಕ್ಷಗಾನದಲ್ಲಿ ಭೈರವಿ ರಾಗವೂ ಸಂಗೀತದಲ್ಲಿ ಬರುವ ಭೈರವಿ ರಾಗವೂ ಒಂದೇ ಆಗಿರುತ್ತದೆ. ಸಂಗೀತದಲ್ಲಿ ಕುಸುರಿ ಕೆಲಸಗಳು ಜಾಸ್ತಿ. ಯಕ್ಷಗಾನದಲ್ಲಿ ಆ ರೀತಿಯಲ್ಲಿ ಇರುವುದಿಲ್ಲ. ಅದು ಮಟ್ಟಿನ ರೀತಿಯಲ್ಲಿ ಹೋಗುತ್ತದೆ. ವೀರರಸದ ಪದ್ಯಗಳು ಏರು ಸ್ಥಾಯಿಯಲ್ಲಿ ಹಾಡುವಂಥದ್ದು. ಇದು ಯಕ್ಷಗಾನದಲ್ಲಿ ಮಾತ್ರ. ಹೆಚ್ಚಾಗಿ ವೀರರಸದ ಪದ್ಯಗಳು ಕೇದಾರಗೌಳ ರಾಗದಲ್ಲಿ ಹೋಗುತ್ತದೆ. ಸಂಗೀತದ ಮೂಲ ಸ್ಥಾನ ಭಾವದಲ್ಲಿದೆ. ಉದಾಹರಣೆಗೆ ಮಗುವಿನ ಅಳುವಿನಲ್ಲೂ ಸಂಗೀತವಿದೆ. ಪ್ರಕೃತಿಯಲ್ಲೂ ಸಂಗೀತವಿದೆ. ಯಕ್ಷಗಾನದಲ್ಲಿ ಬೇಕಾದದ್ದೂ ಅದೇ. ಭಾವ ಯಾರ ಸೊತ್ತೂ ಅಲ್ಲ. ಭಾವದ ಬಗ್ಗೆ ಮಾತನಾಡುವುದಾದರೆ ದುಃಖ ಹಾಗೂ ದುಗುಡ, ದುಗುಡವೇ ಬೇರೆ. ದುಃಖವೇ ಬೇರೆ. ದುಗುಡ ಮನಸಿನಲ್ಲೇ ಅನುಭವಿಸುವಂಥದ್ದು. ಬೇರೆಯವರೊಂದಿಗೆ ಹಂಚಿಕೊಳ್ಳಲಾಗುವುದಿಲ್ಲ. ಇದು ಒಂದು ಭಾವ. ಪತಿಯನ್ನು ಕಳಕೊಂಡಾಗ ರೋದನೆ ಸೃಷ್ಟಿಸುವ ಭಾವ ಬೇರೆ. ಇದನ್ನು ಪ್ರತಿಪಾದಿಸುವಾಗ ಭಾವ ರೂಪವಾಗಿ ಹೇಳಬೇಕು. ಅಲ್ಲಿ ರಾಗದ ಪ್ರಶ್ನೆ ಬರುವುದಿಲ್ಲ. ಯಾವುದೇ ಹಾಡಿರಲಿ, ರಾಗ ಮುಖ್ಯ ಅಲ್ಲ. ಭಾವ ಮುಖ್ಯ. ಅಮ್ಮ ಎಂಬ ಎರಡಕ್ಷರದ ಪದ, ಪದವಷ್ಟೆ. ಅದಕ್ಕೆ ಯಾವ ಭಾವವೂ ಇಲ್ಲ. ಆದರೆ ಅಮ್ಮಾ ಎಂಬ ಪದವನ್ನು ಉಚ್ಚರಿಸುವಾಗ ಇರುವಂಥದ್ದೇ ಭಾವ. ಯಕ್ಷಗಾನದಲ್ಲಿ ಭಾಗವತಿಕೆ ಎಂಬುದು ಸೂತ್ರದಾರಿಕೆ. ನಾಲ್ಕು ಕಂಬದ ನಡುವಲ್ಲಿ ಭಾಗವತ. ಹೊರಗಡೆ ಆತ ಹಾಡುಗಾರನೇ. ಆದರೆ ಭಾಗವತನಿಗೆ ಹಾಡುಗಾರನಿಗಿಂತ ಹೆಚ್ಚಿನ ಜವಾಬ್ದಾರಿ ಅವನಿಗೆ ಅರ್ಥಗಾರಿಕೆ ನಿರ್ವಹಣೆ, ಪದ್ಯ ರಚನೆ ಮಾಡಿ ಕೊಡುವ ತಾಕತ್ತು ಬೇಕು. ಪುರಾಣಗಳನ್ನು ಅಧ್ಯಯನ ಮಾಡಿರಬೇಕು. ಪ್ರಸಂಗಗಳ ತತ್ವಾರ್ಥ ತಿಳಿದುಕೊಂಡಿತರಬೇಕು.

***ನೆನಪಲ್ಲುಳಿಯುವ ಪ್ರಸಂಗಗಳ ಬಗ್ಗೆ ದಿನೇಶ್ ಅಮ್ಮಣ್ಣಾಯರ ಮಾತು***

ಕರ್ನಾಟಕ ಮೇಳದಲ್ಲಿ ತಿರುಗಾಟ ನಡೆಸುತ್ತಿದ್ದಾಗ ಕಾಡಮಲ್ಲಿಗೆ, ಪಟ್ಟದ ಪದ್ಮಲೆ, ಕಚ್ಚೂರ ಮಾಲ್ದಿ, ಪ್ರಸಂಗಗಳು ಸಾಕಷ್ಟು ಹೆಸರು ಮಾಡಿದ ಪ್ರಸಂಗಗಳು. ತುಂಬ ಸಲ ಈ ಪ್ರಸಂಗಗಳನ್ನು ನಿರ್ವಹಿಸಿದ್ದೇನೆ. ನನ್ನ ಸಮಯದಲ್ಲಿ ಅನಂತ್ ಕುಮಾರ್ ಬಂಗಾಡಿ ಬರೆದ ಪ್ರಸಂಗಗಳು ಪ್ರಸಿದ್ದಿಯೂ ಆಯ್ತು, ನನ್ನನ್ನೂ ಎತ್ತರಕ್ಕೇರಿಸಿತು. ಬೊಟ್ಟಿಕೆರೆ ಪುರುಷೋತ್ತಮ ಪೂಂಜರು ಬರೆದ ಮಾನಿಷಾದ ಪ್ರಸಂಗದಲ್ಲಿ ಹಾಡಿದ್ದು ನಾನು. ಈ ಪ್ರಸಂಗ ನನ್ನನ್ನು ತುಂಬ ಎತ್ತರಕ್ಕೇರಿಸಿತು. ಎಷ್ಟರ ಮಟ್ಟಿಗೆ ಎಂದರೆ, "ಪ್ರಸಂಗ ಮಾನಿಷಾದವೇ? ಹಾಗಾದರೆ ದಿನೇಶ್ ಅಮ್ಮಣ್ಣಾಯರೇ ಹಾಡಬೇಕು" ಎನ್ನುವಷ್ಟರ ಮಟ್ಟಿಗೆ. ಬೊಟ್ಟಿಕೆರೆ ಪುರುಷೋತ್ತಮ ಪೂಂಜರು ಒಳ್ಳೆಯ ಕವಿ.. ಎಲ್ಲಾ ವಿಭಾಗದಲ್ಲಿ ಶ್ರೇಷ್ಠರೇ. ಹಿಮ್ಮೇಳ, ವೇಷ ಹೇಳಿಕೊಡುವಂತಹ ಗುರು, ಅಂಗಾಂಗಗಳನ್ನು ಅರಿತವರು. ಒಳ್ಳೆಯ ಪಾಂಡಿತ್ಯ ಇತ್ತು ಅವರಲ್ಲಿ. ಈ ಪ್ರಸಂಗವನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ. ಅಲ್ಲದೆ, ಅಕ್ಷಯಾಂಬರ ಪ್ರಸಂಗವಾದರೆ ಅಮ್ಮಣ್ಣಾಯರು ಬೇಕು ಎಂದು ಹೇಳುವವರಿದ್ದರು. ಶ್ರೀರಾಮ ನಿರ್ಯಾಣವೂ ಇಷ್ಟದ ಪ್ರಸಂಗವೇ.

ತುಳು ಪ್ರಸಂಗದ ಸಮರ್ಥ ನಿರ್ದೇಶಕರಾಗಿಯೂ ಅಮ್ಮಣ್ಣಾಯರ ಅನುಭವ ಅಪಾರ. ಈ ಬಗ್ಗೆ ಅವರ ಮಾತುಗಳು – ತುಳುವಿನಲ್ಲಿ ಅನಂತರಾಮ ಬಂಗಾಡಿಯವರು ಉತ್ತಮ ಪ್ರಸಂಗಗಳನ್ನು ಬರೆದಿದ್ದಾರೆ. ಕೋಟಿ ಚೆನ್ನಯ್ಯ, ತುಳುನಾಡ ಸಿರಿ ಕೋರ್ದಬ್ಬು ಬಾರಗ ಈ ಪ್ರಸಂಗಗಳದ್ದು ಎಲ್ಲಾ ಕನ್ನಡ ಪದ್ಯಗಳೇ. ಆದರೆ ವೇಷ, ಅರ್ಥಗಾರಿಕೆ ಎಲ್ಲ ತುಳು. ನಂತರ ಬಂದಂತಹಾ ಪಟ್ಟದ ಪದ್ಮಲೆ, ಮತ್ತಿತರ ಪ್ರಸಂಗಗಳು ತುಳು ಪದ್ಯ ಸಾಹಿತ್ಯಗಳಿಂದ ಆವೃತವಾದಂತಹಾ ಪ್ರಸಂಗಗಳು. ತುಳುವಿನಲ್ಲಿ ಅಗಾಧವಾದ ಸಾಹಿತ್ಯ ಇದೆ. ತುಳು ಸಾಹಿತ್ಯದಲ್ಲಿ ಇದ್ದಷ್ಟು ವಿಷಯಗಳು ಕನ್ನಡದಲ್ಲಿ ಸಿಗುವುದಿಲ್ಲ. ತುಳು ಸಾಹಿತ್ಯವನ್ನು ನಾನು ಕರ್ನಾಟಕ ಮೇಳದಲ್ಲಿದ್ದಾಗ ಸಮರ್ಥವಾಗಿ ಬಳಸಿದಂತಹಾ ಕಲಾವಿದರಿದ್ದಾರೆ. ತುಳು ಪ್ರಸಂಗಳಲ್ಲಿ ರಾಮದಾಸ ಸಾಮಗರ ವಾಕ್ ಸಾಹಿತ್ಯ ಮೆಚ್ಚುವಂಥದ್ದು. ತುಳು ಪ್ರಸಂಗದಲ್ಲಿ ಸಾಮಗರ ಅರ್ಥಗಾರಿಕೆಯಲ್ಲಿ ಅನ್ಯ ಭಾಷೆ ಬರಲಿಕ್ಕಿಲ್ಲ. ನೇಸರ್ ದೇವೆರ್, ಆನೆ ಮೋನೆದ ದೇವೆರ್, ಆಜಿ ಮೋನೆದ ದೇವೆರ್, ಮುಂಡೊಡು ಗೆಂಡದ ಕಣ್ಣಿತ್ತಿ ದೇವೆರ್, ಮೂಜಿ ಮುನೆತ್ತ ಬಡು ಪತ್ತಿ ದೇವೆರ್, ಹೀಗೆ ಸಮೃದ್ಧ ತುಳು ಸಾಹಿತ್ಯ ಪ್ರಭಾವಶಾಲಿಯಾಗಿ ಬಳಸುತ್ತಿದ್ದರು. ರಂಗ ನಿರ್ದೇಶನದ ವಿಚಾರಕ್ಕೆ ಶಕಪುರುಷ ಅಗರಿ ಶ್ರೀನಿವಾಸ ಭಾಗವತರು. ದಾಮೋದರ ಮಂಡೆಚ್ಚರು ಅತ್ಯಂತ ಸಮರ್ಥರು. ನನ್ ಗುರುಗಲಾದ ದಾಮೋದರ ಮಂಡೆಚ್ಚರು ಭಾಗವತಿಕೆಯಲ್ಲಿ ಸಂಗೀತದ ಪ್ರಭಾವವಿತ್ತು. ಅವರಿಂದಲೇ ಪ್ರಭಾವಿತನಾಗಿ ನಾನು ಸಂಗೀತ ಪರಂಪರೆಯನ್ನು ಬೆಳೆಸಿಕೊಂಡು ಬಂದೆ ಎನ್ನುತ್ತಾರೆ.

***ಕಲಾವಿದರು – ಸೀತೂರು ಅನಂತ ಪದ್ಮನಾಭ***



ಮಲೆನಾಡು ಪ್ರದೇಶದಲ್ಲಿ ತಮ್ಮ ಸಾಮಾಜಿಕ ಕಾರ್ಯಗಳ ಮೂಲಕ ಗುರುತಿಸಿಕೊಂಡಿರುವ ಸೀತೂರು ಅನಂತ ಪದ್ಮನಾಭರು ಅಣ್ಣಾಜಿ ಎಂದೇ ಪರಿಚಿತರು. ದೇವಸ್ಥಾನದ ಮೊಕ್ತೇಸರರಾಗಿ ಗುತ್ಯಮ್ಮ ಎಂಬ ಹೆಸರಿನಲ್ಲಿ ಯಕ್ಷಗಾನ ಮೇಳವನ್ನು ಕಳೆದ ಮೂವತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಯಕ್ಷಜೀವನದ ಅನುಭವಗಳನ್ನು ಅವರು ಹಂಚಿಕೊಳ್ಳುವುದು ಹೀಗೆ. ಯಕ್ಷಗಾನ ಕಲಾವಿದನಾಗಿ ಜಂಜಾಟದ ಜೀವನದಲ್ಲಿ ಕಲೆ ಎನ್ನುವುದು ಮನಸಿಗೆ ತುಂಬಾ ಸಂತೋಷ ನೀಡುತ್ತದೆ. ಎಷ್ಟೇ ಸಂಸಾರ ತಾಪತ್ರಯಗಳಿದ್ದರೂ ಯಕ್ಷಗಾನದ ರಂಗಕ್ಕೆ ಬಂದಾಗ ಎಲ್ಲವನ್ನೂ ಮರೆಯಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ. ಕುಟುಂಬದಲ್ಲಿ ಇವರ ದೊಡ್ಡಪ್ಪ ಪದ್ಯ ಹೇಳುತ್ತಿದ್ದ ನೆನಪು ಇವರಿಗಿದೆ. ಆರಂಭದಲ್ಲಿ ಜಾನಪದ ಕಲಾಮಂಡಳಿಯನ್ನು ಮುನ್ನಡೆಸುತ್ತಿದ್ದ ಇವರು ಹಲವು ವರ್ಷಗಳ ಹಿಂದೆ ಶಿವರಾಮ ಕಾರಂತರನ್ನು ಭೇಟಿಯಾಗಿ ಅವರು ಸೂಚಿಸಿದ ಮಂಜುನಾಥ ಪ್ರಭುಗಳನ್ನು ತಮ್ಮೂರಿಗೆ ಕರೆಸಿಕೊಂಡು ಶನಿವಾರ ಮತ್ತು ಭಾನುವಾರದ ದಿನಗಳಲ್ಲಿ ಯಕ್ಷಗಾನ ತರಗತಿ ನಡೆಸಲು ಪ್ರಾರಂಭಿಸಿದರು. ಅಲ್ಲಿನ ಮಕ್ಕಳು ಮತ್ತು ಯುವಕರಿಗಾಗಿ ಪ್ರಾರಂಭಿಸಿದ ಯಕ್ಷಗಾನ ತರಗತಿಯೇ ಇವರೂ ಯಕ್ಷಗಾನ ಕಲಿಯುವುದಕ್ಕೆ ವೇದಿಕೆ ಒದಗಿಸಿಕೊಟ್ಟಿತ್ತು. ಹೀಗೆ 30 ವರ್ಷಗಳಿಂದ ಯಕ್ಷಗಾನ ಸೇವೆಯಲ್ಲಿ ತೊಡಗಿಸಿಕೊಂಡಿರುವ ಗುತ್ಯಮ್ಮ ಮೇಳ ಇಂದು ಕೇವಲ ಶಿವಮೊಗ್ಗ ಜಿಲ್ಲೆ ಮಾತ್ರವಲ್ಲದೆ ಉತ್ತರ ಕನ್ನಡ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ಪ್ರದರ್ಶನ ನೀಡಿ ಮೆಚ್ಚುಗೆಗೆ ಪಾತ್ರವಾಗಿದೆ. ಸಾಂಪ್ರದಾಯಿಕ ಯಕ್ಷಗಾನ ಪ್ರದರ್ಶನ ನೀಡುವ ಗುತ್ಯಮ್ಮ ಮೇಳ ಇತರ ಯಾವುದೇ ಮೇಳಗಳ ಜೊತೆ ಸ್ಪರ್ಧೆ ನಡೆಸುವುದು ಉದ್ದೇಶವಲ್ಲ ಎನ್ನುವುದು ಅಣ್ಣಾಜಿಯವರ ಮಾತು. ಆದರೆ ಕೂಡಾಟ ಮಾಡಿದ ಅನುಭವ ಇದೆ. ಮೇಳದ ಯಜಮಾನರಾಗಿ ಮೇಳ ನಡೆಸುವ ಸವಾಲುಗಳ ಬಗ್ಗೆ ನುಡಿಯುವ ಅನಂತ ಪದ್ಮನಾಭರು ಮೇಳ ನಡೆಸುವುದು ಕಷ್ಟ. ತಾಳ್ಮೆ ಇದ್ರೆ ನಡೆಸಬಹುದು. ಏಕೆಂದರೆ ವಿಭಿನ್ನ ಅಭಿರುಚಿ ಇರುವ ಪ್ರೇಕ್ಷಕರಿರುತ್ತಾರೆ. ಆಟ ಆಡಿಸುವವರಿರುತ್ತಾರೆ. ಕಲಾವಿದರ ಮನಸ್ಥಿಯೂ ವಿಭಿನ್ನವಾಗಿರುತ್ತದೆ. ಇದೇ ಕಾರಣಕ್ಕಾಗಿ ನಿಭಾಯಿಸಲಾಗದೆ ಸುಮಾರು ಜನ ಮೇಳ ಮಾಡಿ ಬಿಟ್ಟಿದ್ದಾರೆ ಎಂದೆನ್ನುತ್ತಾರೆ ಅವರು. ಚಿಟ್ಟಾಣಿ ರಾಮಚಂದ್ರ ಹೆಗಡೆ, ಸುಬ್ರಹ್ಮಣ್ಯ ಚಿಟ್ಟಾಣಿ ಧಾರೇಶ್ವರ ಭಾಗವತರು, ವಾಸುದೇವ ಸಾಮುಗರು ಮೊದಲಾದ ಪ್ರಖ್ಯಾತರು ಇವರ ಮೇಳದ ರಂಗವನ್ನೇರಿದ್ದಾರೆ. ಸಂಪೂರ್ಣ ಮಹಾಭಾರತ, ಸಂಪೂರ್ಣ ರಾಮಾಯಣ, ಭಾಗವತದ ತಾಳಮದ್ದಳೆಯನ್ನು ಕಳೆದ 12 ವರ್ಷಗಳಿಂದ ಸತತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇತ್ತೀಚಿಗೆ ಯಕ್ಷಗಾನದಲ್ಲಾಗುತ್ತಿರುವ ಬದಲಾವಣೆಗಳ ಬಗ್ಗೆ ಖೇದ ವ್ಯಕ್ತಪಡಿಸತ್ತಾರೆ ಅಣ್ಣಾಜಿ. ಅನೇಕ ಸಲ ಜನರ ನಿರೀಕ್ಷೆಗಳ ಪ್ರಕಾರ ಪ್ರದರ್ಸನ ನೀಡುವುದು ಕಷ್ಟ ಸಾಧ್ಯ. ಸುದೀರ್ಘ ಭಾಗವತಿಕೆ, ನಾಟ್ಯ, ಅತಿಯಾದ ಹಾಸ್ಯ ಬಯಸುವುದು, ಭೂತ ದೊಂದಿ ರಂಗಸ್ಥಳಕ್ಕೆ ಬರಬೇಕು. ಬ್ಯಾಂಡ್ ಸೆಟ್ ಬೇಕು ಈ ರೀತಿಯ ಬೇಡಿಕೆಗಳಿರುತ್ತವೆ. ಯಕ್ಷಗಾನದಲ್ಲಿ ಭೂತ ದೈವ ನರ್ತನ ಇಂತಹಾ ಪ್ರದರ್ಶನಗಳನ್ನು ನೀಡುವುದು ಅನೇಕ ಸಲ ಸೂಕ್ತ ಎಂದೆನಿಸುವುದಿಲ್ಲ ಎಂದು ಅವರ ಅಭಿಪ್ರಾಯ. ಮುಂದಿನ ದಿನಗಳಲ್ಲಿ ಹಳೆಯ ಪ್ರಸಂಗಗಳನ್ನು ಹೊಸರೀತಿ ಹೇಗೆ ಕೊಡಲು ಸಾಧ್ಯ ಎಂಬುದರ ಚಿಂತನೆ ನಡೆಸುತ್ತಿದ್ದೇವೆ. ಹಳೆ ವೇಷಗಳಲ್ಲೇ ಬದಲಾವಣೆ ತರಲು ಸಾಧ್ಯವೇ ಎಂದು ಕೂಡಾ ಯೋಚಿಸುತ್ತಿದ್ದೇವೆ. ಎಂಬುದು ಅನಂತ ಪದ್ಮನಾಭರ ಮಾತು

# ನಮ್ಮ ಲೈಬ್ರರಿ – ಅಂಗದ ಸಂಧಾನ

ರಾಮಾಯಣದಲ್ಲಿ ರಾಮ ರಾವಣರ ಸಂಗ್ರಾಮ ಆರಂಭವಾಗುವ ಮೊದಲು ಕಪಿ ಸೈನ್ಯದಿಂದ ಸಮುದ್ರಕ್ಕೆ ಸೇತು ನಿರ್ಮಿಸಿ ಲಂಕೆಗೆ ಬಂದು ರಾವಣನಲ್ಲಿ ಸೀತೆಯನ್ನು ರಾಮನಿಗೆ ಒಪ್ಪಿಸುವಂತೆ ಮನವೊಲಿಸಿ ಯುದ್ಧವನ್ನು ನಿಲ್ಲಿಸಲು ರಾಮ ಸಂಧಾನಕ್ಕಾಗಿ ವಾಲೀಪುತ್ರ ಅಂಗದನನ್ನು ರಾವಣನ ಆಸ್ಥಾನಕ್ಕೆ ಕಳುಹಿಸುವ ಸಂದರ್ಭದ ಕಥಾನಕ ಹೊಂದಿರುವ ಯಕ್ಷಗಾನ ಪ್ರಸಂಗವೇ ಅಂಗದ ಸಂಧಾನ. ಯಕ್ಷಗಾನದಲ್ಲಿ ಅಂಗದ ಸಂಧಾನವನ್ನು ಬರೆದ ಮೊದಲ ಕವಿ ಕುಂಬಳೆ ಪಾರ್ತಿ ಸುಬ್ಬ. ಆದರೂ ಈಗ ದೊರೆತಿರುವ ಮಾಹಿತಿಯಂತೆ ಹಲವರು ಇದೇ ಕಥಾನಕ ಹೊಂದಿರುವ ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ. ಅಂಗದ ಸಂಧಾನ ಯಕ್ಷಗಾನ ಪ್ರಸಂಗ ಮೂರು ಭಾಷೆ ಒಂದು ಲಿಪಿಯಲ್ಲಿ ಐದು ಕವಿಗಳಿಂದ ರಚಿಸಲ್ಪಟ್ಟು ಆರು ಪ್ರಕಾಶಕರಿಂದ ಪ್ರಕಟಿಸಲ್ಪಟ್ಟ ಕೃತಿ. ಈ ಪ್ರಸಂಗವನ್ನು ಕುಂಬಳೆ ಪಾರ್ತಿಸುಬ್ಬ ಮತ್ತು ಮೈಸೂರು ಪ್ರಾಂತ್ಯದ ಅಳಿಯ ಲಿಂಗರಾಜು ಹಾಗೂ ತುಳುಭಾಷೆಯಲ್ಲಿ ಕೆಮ್ಮತ್ತೂರು ದೊಡ್ಡಣ್ಣ ಶೆಟ್ಟರು, ಕೊಂಕಣಿ ಭಾಷೆಯಲ್ಲಿ ಹೆಬ್ರಿ ಬಿಎಂ ಶೆಣೈ ಬರೆದಿರುವುದಾಗಿ ತಿಳಿದು ಬರುತ್ತದೆ. ವಿಶ್ವ ವಿನೋದ ಬನಾರಿಯವರು ಕೂಡಾ ಇದೇ ಪ್ರಸಂಗವನ್ನು ಬರೆದಿದ್ದು, ಯಕ್ಷಗವಾಹಿನಿಯ ಪ್ರತಿಕೋಶದಲ್ಲಿ ಇತರ ಕವಿಗಳ ಪ್ರಸಂಗವು ಲಭ್ಯವಿದ್ದು ಬಿಎಂ ಶೆಣೈ (ಕೊಂಕಿಣಿ) ಹಾಗೂ



ತೆಂಕು

ವಿಶ್ವ ವಿನೋದ ಬನಾರಿಯವರ ಪ್ರಸಂಗಗಳು ಲಭ್ಯವಿಲ್ಲ. 1954ರಲ್ಲಿ ಅಂಗದರಾಜಿ ಪ್ರಸಂಗವನ್ನು ಕೆಮ್ಮತ್ತೂರು ದೊಡ್ಡಣ್ಣ ಶೆಟ್ಟಿಯವರು ತುಳು ಭಾಷೆಯಲ್ಲಿ ರಚಿಸಿ ಉಡುಪಿ ಕೊರಂಗ್ರಪಾಡಿಯ ಕಸ್ತೂರಿ ಸಾಹಿತ್ಯ ಮಾಲೆ ಪ್ರಕಾಶನದವರು ಪ್ರಕಟಿಸಿದ್ದಾರೆ. ಇದನ್ನು ಕವಿ ತಮ್ಮ ತಾಯಿ ರಾಧಮ್ಮ ಶೆಟ್ಟಿಯವರಿಗೆ ಅರ್ಪಣೆ ಮಾಡಿದ್ದಾರೆ. ಕೃತಿಯ ಬೆಲೆ ನಾಲ್ಕಾಣೆ. ಈ ಪುಸ್ತಕವನ್ನು ಮಣಿಪಾಲ ಪವರ್ ಪ್ರಸ್ ನಲ್ಲಿ ಮುದ್ರಿಸಲಾಗಿದೆ. ಈ ಪ್ರಸಂಗ ಅವಲೋಕಿಸಿದಾ ಗ ದೊಡ್ಡಣ್ಣ ಶೆಟ್ಟರು ಪಾರ್ತಿಸುಬ್ಬ ಕವಿಯ ಅಂಗದ ಸಂಧಾನ ಕನ್ನಡ ಯಕ್ಷಗಾನವನ್ನು ತುಳು ಭಾಷೆಯಲ್ಲಿ ಅನುವಾದಿಸಿದಂತೆ ಕಾಣುತ್ತದೆ. ದೇವತಾ ಪ್ರಾರ್ಥನೆ ಹಾಗೂ ಅಂತ್ಯದ ಮಂಗಳ ಪದ್ಯಗಳನ್ನು ಹೊರತು ಪಡಿಸಿ ಉಳಿದ ಪದ್ಯಗಳು ಪಾರ್ತಿಸುಬ್ಬನ ಅಂಗದ ಸಂಧಾನ ಕನ್ನಡ ಪ್ರಸಂಗ ಪುಸ್ತಕದ ನೇರ ತುಳು ಭಾಷಾಂತರದಂತೆ ಕಂಡು ಬರುತ್ತದೆ. ಆದರೆ ಭಾಷಾಂತರದಲ್ಲಿ ಕವಿ ಯಕ್ಷಗಾನ ಛಂದಸ್ಸು, ಪ್ರಾಸ, ಲಯ, ಸ್ವರಗಳಿಗೆ ಲೋಪವಾಗದಂತೆ ತನ್ನದೇ ಶೈಲಿಯಲ್ಲಿ ಬರೆದಿರುವುದು ಈ ಕೃತಿಯ ವಿಶಿಷ್ಟತೆ. ಪಾರ್ತಿಸುಬ್ಬನ ಅಂಗದ ಸಂಧಾನ ಪ್ರಸಂಗದ ಉತ್ತರಾರ್ಧದಲ್ಲಿ ರಾಮ ರಾವಣ ಯುದ್ಧದವರೆಗಿನ ಕಥೆಯನ್ನು ಸಂಕ್ಷಿಪ್ತವಾಗಿ ಬರೆದಿದ್ದರೆ ದೊಡ್ಡಣ್ಣ ಶೆಟ್ಟರು ಇದನ್ನೇ ತುಳುವಿನಲ್ಲಿ ಅನುವಾದಿಸಿದ್ದಾರೆ. ಅಂಗದರಾಜಿ ಪ್ರಸಂಗದಲ್ಲಿ 167 ಪದ್ಯಗಳಿವೆ. (ಪಾರ್ತಿ ಸುಬ್ಬನ ಮೂಲ ಪ್ರಸಂಗದಲ್ಲಿ ಸುಮಾರು 262 ಪದ್ಯಗಳಿವೆ.) ಪಾರ್ತಿಸುಬ್ಬನ ಈ ಕೃತಿ 1955 ರಲ್ಲಿ ಉಡುಪಿ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದಲ್ಲಿ ಏಳನೆಯ ಅಚ್ಚನ್ನು ಮಂಗಳೂರಿನ ಶ್ರೀ ನಿತ್ಯಾನಂದ ಗ್ರಂಥಾಲಯದಲ್ಲಿ ಎಂಟನೇ ಆವೃತ್ತಿಯಲ್ಲಿ (1988) ಪ್ರಕಟಗೊಂಡಿದೆ. ಮನ್ಮಧ್ವ ಸಿದ್ಧಾಂತ ಗ್ರಂಥಾಲಯದಲ್ಲಿ ಏಳನೆಯ ಮುದ್ರಣದಲ್ಲಿ 2000 ಪ್ರತಿಗಳು ಮುದ್ರಣಗೊಂಡಿವೆ. ಎಲ್ಲ ಆವೃತ್ತಿ ಸೇರಿ ಸುಮಾರು ಹತ್ತರಿಂದ ಹನ್ನೆರಡು ಸಾವಿರ ಅಂಗಧ ಸಂಧಾನ ಪ್ರಸಂಗ ಪುಸ್ತಕ 40–50ರ ದಶಕದಲ್ಲಿ ಅಚ್ಚಾಗಿದ್ದು ಎಲ್ಲವೂ ಮಾರಾಟವಾಗಿತ್ತು. 1955 ರಲ್ಲಿ ಪ್ರಕಟಿಸಲ್ಪಟ್ಟ ಈ ಪ್ರಸಂಗದ ಏಳನೆಯ ಅಚ್ಚನ್ನು 1967 ರಲ್ಲಿ ಶ್ರೀ ನಿತ್ಯಾನಂದ ಗ್ರಂಥಾಲಯ ಮಂಗಳೂರು (ಮುದ್ರಣ ಗಣೇಶ್ ಪ್ರಿಂಟರ್ಸ್ ಮಂಗಳೂರು) ನಂತರ, 1979 ರಲ್ಲಿ ಶ್ರೀ ನಿತ್ಯಾನಂದ ಗ್ರಂಥಾಲಯ ಮಂಗಳೂರು (ಮುದ್ರಣ ಜಯದೇವ ಪ್ರಿಂಟರ್ಸ್ ಬೆಂಗಳೂರು) 1988ರಲ್ಲಿ ಪ್ರಭಾಕರ ಜೋಶಿಯವರ ಸಂಪಾದಕತ್ವದ ಮುದ್ರಣ, ಕೆ ಎಂ ರಾಘವ ನಂಬಿಯಾರ ಸಂಪಾದಕತ್ವದ ಕನ್ನಡ ಸಂಸ್ಕೃತಿ ಮಇಲಾಖೆಯ ಸಂಪುಟ ವಿಶ್ವ ಕನ್ನಡ ಸಮ್ಮೆಳನ ಸಂದರ್ಬದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳುರು ಇವರು ಪ್ರಕಟಿಸಿದ ಯಕ್ಷಗಾನ ಪ್ರಸಂಗಗಳು( ಮುದ್ರಣ ರಾಜೇಶ್ ಪವರ್ ಪ್ರೆಸ್ ದರ್ಬೆ ಪತ್ತೂರು ಹೀಗೆ ಆರು ಪ್ರಕಟಣೆಗಳ ಪಾರ್ತಿಸುಬ್ಬನ ಅಂಗಧ ಸಂಧಾನ ಪುಸ್ತಕ ಲಭ್ಯವಿರುವುದು ಕಂಡು ಬರುತ್ತದೆ. ಇದಲ್ಲದೆ ಕೆಮ್ಮತ್ತೂರು ದೊಡ್ಡಣ್ಣ ಶೆಟ್ಟರ ಉಡುಪಿ ಕೊರಂಗ್ರಪಾಡಿ ಕಸ್ತೂರಿ ಮಾಲಾ ಪ್ರಕಟಣೆಯ (1954) ತುಳು ಪ್ರಸಂಗ ಅಂಗದರಾಜಿ ಪರ್ಸಂಗ ಹಾಗೂ ಅಳಿಯ ಲಿಂಗರಾಜು ರಚಿಸಿದ ಸಂಧಾನ ಸೇತು ಬಂಧನ ಪ್ರಸಂಗ (ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಇವರ ಯಕ್ಷಗಾನ ಸಾಹಿತ್ಯ –5) ಕೂಡಾ



ಬಡಗು

ಯಕ್ಷವಾಹಿನಿಯ ಪ್ರಸಂಗ ಪ್ರತಿ ಸಂಗ್ರಹ ಕೋಶದಲ್ಲಿ ಲಭ್ಯವಿದೆ. ಇನ್ನು ಅಳಿಯ ಲಿಂಗರಾಜ ಮೈಸೂರು ಪ್ರಾಂತ್ಯದ ಯಕ್ಷಗಾನ ಸಾಹಿತಿ ಕೂಡಾ ಅಂಗದ ಸಂಧಾನ ಪ್ರಸಂಗ ರಚಿಸಿದ್ದು ಇದನ್ನು ಮೈಸೂರು ವಿಶ್ವ ವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯವರು 2011 ರಲ್ಲಿ ಜಿ.ಜಿ. ಮಂಜುನಾಥ ಇವರ ಸಂಪಾದಕತ್ವದ ಅಳಿಯ ಲಿಂಗರಾಜ ಯಕ್ಷಗಾನ ಸಾಹಿತ್ಯ – 5 ಸಂಪುಟದಲ್ಲಿ ಪ್ರಕಟಿಸಿದ್ದಾರೆ. 382 ಪದ್ಯಗಳಿಂದ ರಚಿಸಲ್ಪಟ್ಟ ಈ ಕಾವ್ಯ ಕೂಡಾ ಯಕ್ಷಗಾನ ಶೈಲಿಯ ಪಾರಂಪರಿಕ ಯಕ್ಷಗಾನ ಛಂದಸ್ಸು, ಮಟ್ಟು, ರಾಗ, ತಾಳಗಳಿಂದ ಕೂಡಿದ ಉತ್ತಮ ಯಕ್ಷಗಾನ ಕೃತಿ. ಪ್ರಸಂಗದ ಪೂವಾರ್ಧದಲ್ಲಿ ವಿಭೀಷಣ ರಾವಣನಿಗೆ ಹಿತೋಪದೇಶ ಮಾಡಿ ಆತ ಸೀತೆಯನ್ನು ರಾಮನಿಗೆ ಒಪ್ಪಿಸಲು ನಿರಾಕರಿಸಿದಾಗ ರಾಮನಲ್ಲಿಗೆ ಬಂದು ಶರಣಾಗುವ ಕಥೆ, ಸಮುದ್ರರಾಜನ ಗರ್ವಭಂಗ, ಶ್ರೀ ರಾಮ ರಾಮೇಶ್ವರದಲ್ಲಿ ಶಿವಲಿಂಗ ಸ್ಥಾಪಿಸಿ ಪೂಜಿಸುವ, ವಾನರಸೇನೆಯಿಂದ ಸೇತು ನಿರ್ಮಾಣ ಮೊದಲಾದ ಸನ್ನಿವೇಶಗಳಿದ್ದರೆ ಉತ್ತರಾರ್ಧದಲ್ಲಿ ಅಂಗದ ಸಂಧಾನ ಕಥೆಯನ್ನು ಹೊಂದಿದೆ.

*ಲೇಖಕರು – ಶಿರೂರು ಉಮೇಶ್*

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ–9449686807 ನಮ್ಮ ವೆಬ್ ಸೈಟ್ ವಿಳಾಸ– www.nyt.1ngo.in - ಸಂಪಾದಕರು**